# ಅಧ್ಯಾಯ – I

## 1. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯವೈಖರಿ

### ಪೀಠಿಕೆ

**1.1.** ಕರ್ನಾಟಕದಲ್ಲಿ ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳು (ಸಾವಉಗಳು) ರಾಜ್ಯ ಸರ್ಕಾರಿ ಕಂಪನಿಗಳು ಹಾಗೂ ಶಾಸನಬದ್ಧ ನಿಗಮಗಳನ್ನು ಒಳಗೊಂಡಿವೆ. ರಾಜ್ಯ ಸಾವಉಗಳನ್ನು ಸಾರ್ವಜನಿಕರ ಕ್ಷೇಮಾಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ವಾಣಿಜ್ಯಿಕ ಸ್ವರೂಪದ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಸ್ಥಾಪಿಸಲಾಯಿತು ಹಾಗೂ ಅದು ರಾಜ್ಯದ ಆರ್ಥಿಕತೆಯಲ್ಲಿ ಒಂದು ವಿಶೇಷ ಸ್ಥಾನಮಾನ ಹೊಂದಿದೆ. 31 ಮಾರ್ಚ್ 2015ರಲ್ಲಿದ್ದಂತೆ, ಕರ್ನಾಟಕದಲ್ಲಿ 93 ಸಾವಉಗಳಿದ್ದವು. ಇವುಗಳ ಪೈಕಿ, ಎರಡು ಸಾರ್ವಜನಿಕ ವಲಯದ ಉದ್ದಿಮೆಗಳನ್ನು[1] ಷೇರು ವಿನಿಮಯ ಕೇಂದ್ರ (ಗಳಲ್ಲಿ) ನೋಂದಣಿ ಮಾಡಲಾಗಿತ್ತು. 2014–15ನೇ ಸಾಲಿನಲ್ಲಿ, ಎರಡು ಸಾವಉಗಳನ್ನು[2] ಸ್ಥಾಪಿಸಲಾಗಿದ್ದು ನಾಲ್ಕನ್ನು[3] ಮುಚ್ಚಲಾಯಿತು. 31 ಮಾರ್ಚ್ 2015ರಲ್ಲಿದ್ದಂತೆ ಕರ್ನಾಟಕದಲ್ಲಿರುವ ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 1.1: 31 ಮಾರ್ಚ್ 2015ರಲ್ಲಿದ್ದಂತೆ ಸಾರ್ವಜನಿಕ ವಲಯದ ಉದ್ದಿಮೆಗಳ ಒಟ್ಟು ಸಂಖ್ಯೆ**

| ಸಾವಉಗಳ ಮಾದರಿ | ಕಾರ್ಯನಿರ್ವಹಿಸುತ್ತಿರುವ ಸಾವಉಗಳು | ಕಾರ್ಯಸ್ಥಗಿತಗೊಂಡಿರುವ ಸಾವಉಗಳು[4] | ಒಟ್ಟು |
|---|---|---|---|
| ಸರ್ಕಾರಿ ಕಂಪನಿಗಳು[5] | 75 | 12 | 87 |
| ಶಾಸನಬದ್ಧ ನಿಗಮಗಳು | 6 | 0 | 6 |
| **ಒಟ್ಟು** | **81** | **12** | **93** |

ಸೆಪ್ಟಂಬರ್ 2015ರಲ್ಲಿದ್ದಂತೆ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳು ಇತ್ತೀಚೆಗೆ ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ₹ 48,765.18 ಕೋಟಿ ಮೊತ್ತದಷ್ಟು ವಹಿವಾಟನ್ನು ದಾಖಲಿಸಿದ್ದವು. ಈ ವಹಿವಾಟು 2014–15ರ ಸಾಲಿಗೆ ರಾಜ್ಯದ ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಶೇಕಡಾ 7.12ಕ್ಕೆ ಸಮನಾಗಿತ್ತು. ಕಾರ್ಯನಿರ್ವಹಿಸುತ್ತಿರುವ ಸಾವಉಗಳು, ಅವುಗಳ ಇತ್ತೀಚೆಗೆ ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ಸೆಪ್ಟಂಬರ್ 2015ರಲ್ಲಿದ್ದಂತೆ ಒಟ್ಟಾರೆ ₹ 538.94 ಕೋಟಿ ಮೊತ್ತದಷ್ಟು ನಿವ್ವಳ ಲಾಭವನ್ನು ಗಳಿಸಿದ್ದವು. ಮಾರ್ಚ್ 2015ರ ಅಂತ್ಯದಲ್ಲಿದ್ದಂತೆ ಸಾವಉಗಳು 1.92 ಲಕ್ಷ ಉದ್ಯೋಗಿಗಳನ್ನು ನೇಮಕ ಮಾಡಿಕೊಂಡಿದ್ದವು.

31 ಮಾರ್ಚ್ 2015ರಲ್ಲಿದ್ದಂತೆ, ₹ 582.52 ಕೋಟಿ ಮೊತ್ತದಷ್ಟು ಹೂಡಿಕೆಗಳನ್ನು ಹೊಂದಿದ್ದಂತಹ 12 ಸಾವಉಗಳು ಕಳೆದ 13 ವರ್ಷಗಳಿಂದಲೂ ಕಾರ್ಯಸ್ಥಗಿತಗೊಂಡಿದ್ದವು. ಕಾರ್ಯಸ್ಥಗಿತಗೊಂಡಿರುವ ಸಾವಉಗಳಲ್ಲಿ ಮಾಡಲಾಗಿರುವ ಹೂಡಿಕೆಗಳು ರಾಜ್ಯದ ಆರ್ಥಿಕ ಬೆಳವಣಿಗೆಗೆ ಯಾವುದೇ ಕಾಣಿಕೆಯನ್ನೂ ನೀಡುವುದಿಲ್ಲವಾದ್ದರಿಂದ ಇದು ಒಂದು ನಿರ್ಣಾಯಕ ಕ್ಷೇತ್ರವಾಗಿದೆ.

---

[1] ಮೈಸೂರು ಕಾಗದ ಕಾರ್ಖಾನೆ ನಿಯಮಿತ ಹಾಗೂ ಮೈಸೂರು ಪೈಂಟ್ಸ್ ಮತ್ತು ವಾರ್ನಿಷ್ ನಿಯಮಿತ.

[2] ಕರ್ನಾಟಕ ಸೌರ ವಿದ್ಯುತ್ ಅಭಿವೃದ್ಧಿ ನಿಗಮ ಖಾಸಗಿ ನಿಯಮಿತ ಹಾಗೂ ಕರ್ನಾಟಕ ಗಣಿಗಾರಿಕೆ ಪರಿಸರ ನವೀಕರಣ ನಿಗಮ ನಿಯಮಿತ.

[3] ಕರ್ನಾಟಕ ಇಎಂಟಿಎ ಕಲ್ಲಿದ್ದಲು ಗಣಿಗಳು ನಿಯಮಿತ, ಕರ್ನಾಟಕ ರಾಜ್ಯ ಕಲ್ಲಿದ್ದಲು ಗಣಿಗಾರಿಕೆ ಕಂಪನಿ ನಿಯಮಿತ, ಚಾಮುಂಡಿ ಯಂತ್ರೋಪಕರಣಗಳು ನಿಯಮಿತ ಹಾಗೂ ಕರ್ನಾಟಕ ರಾಜ್ಯ ವಸ್ತ್ರೋದ್ಯಮ ನಿಯಮಿತ.

[4] ಕಾರ್ಯಸ್ಥಗಿತ ಸಾವಉಗಳೆಂದರೆ, ತಮ್ಮ ಕಾರ್ಯಾಚರಣೆ ನಡೆಸುವುದನ್ನು ಸಮಾಪ್ತಿಗೊಳಿಸಿರುವವುಗಳು.

[5] ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139 (5) ಹಾಗೂ 139 (7)ರಲ್ಲಿ ಉಲ್ಲೇಖಿಸಲಾಗಿರುವ ಇತರೆ ಕಂಪನಿಗಳನ್ನು ಒಳಗೊಂಡಿದೆ.

**ಉತ್ತರದಾಯಿತ್ವದ ಚೌಕಟ್ಟು**

**1.2**. ಸರ್ಕಾರಿ ಕಂಪನಿಗಳ ಲೆಕ್ಕಪರಿಶೋಧನೆಯ ಪ್ರಕ್ರಿಯೆಗಳು ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಪರಿಚ್ಛೇದ 139 ಹಾಗೂ 143ರ ಅನುಕ್ರಮ ಅನುವುಗಳಿಂದ ನಿರ್ವಹಿಸಲ್ಪಡುತ್ತವೆ. ಅಧಿನಿಯಮದ ಪರಿಚ್ಛೇದ 2(45)ರ ಪ್ರಕಾರ, ಸರ್ಕಾರಿ ಕಂಪನಿ ಎಂದರೆ ಷೇರು ಬಂಡವಾಳದ ಶೇಕಡಾ ಐವತ್ತೊಂದಕ್ಕಿಂತ ಕಡಿಮೆ ಇಲ್ಲದಂತೆ ಪಾವತಿಸಲ್ಪಟ್ಟಿರುವ ಷೇರು ಬಂಡವಾಳವನ್ನು ಕೇಂದ್ರ ಸರ್ಕಾರ, ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳು ಅಥವಾ ಭಾಗಶ:ವಾಗಿ ಕೇಂದ್ರ ಸರ್ಕಾರ ಮತ್ತು ಭಾಗಶ:ವಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ರಾಜ್ಯ ಸರ್ಕಾರಗಳು ಹೊಂದಿರುವ ಯಾವುದೇ ಕಂಪನಿಯಾಗಿರಬಹುದು ಹಾಗೂ ಅಂತಹ ಸರ್ಕಾರಿ ಕಂಪನಿಯ ಒಂದು ಅಧೀನ ಸಂಸ್ಥೆಯಾಗಿರುವ ಕಂಪನಿಯನ್ನೂ ಅದು ಒಳಗೊಂಡಿರುತ್ತದೆ.

ಮುಂದುವರೆದು, ಅಧಿನಿಯಮದ ಪರಿಚ್ಛೇದ 143ರ ಉಪ–ಪರಿಚ್ಛೇದ 7ರ ಪ್ರಕಾರ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು(ಸಿಎಜಿ), ಕಂಪನಿಯು ಪರಿಚ್ಛೇದ 139ರ ಉಪ–ಪರಿಚ್ಛೇದ (5) ಅಥವಾ ಉಪ–ಪರಿಚ್ಛೇದ (7)ರ ಅಡಿಯಲ್ಲಿ ವ್ಯಾಪಿಸಿದ್ದಲ್ಲಿ, ಅಗತ್ಯವೆಂಬುದಾಗಿ ಪರಿಗಣಿಸಿದಲ್ಲಿ, ಒಂದು ಆದೇಶದ ಮೂಲಕ, ಅಂತಹ ಕಂಪನಿಯ ಲೆಕ್ಕಪತ್ರಗಳ ಪರೀಕ್ಷಾ–ಪರಿಶೀಲನೆಯನ್ನು ಮಾಡಿಸಬಹುದು ಹಾಗೂ ಸಿಎಜಿಯವರ (ಕರ್ತವ್ಯಗಳು, ಅಧಿಕಾರಗಳು ಹಾಗೂ ಸೇವಾ ಷರತ್ತುಗಳು) ಅಧಿನಿಯಮ, 1971ರ ಪರಿಚ್ಛೇದ 19ಎ ಅಡಿಯಲ್ಲಿನ ಅನುವುಗಳು ಅಂತಹ ಪರೀಕ್ಷಾ–ಪರಿಶೀಲನೆಗೆ ಅನ್ವಯಗೊಳ್ಳುತ್ತವೆ. ಈ ರೀತಿಯಾಗಿ, ಒಂದು ಸರ್ಕಾರಿ ಕಂಪನಿ ಅಥವಾ ಕೇಂದ್ರ ಸರ್ಕಾರ, ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳು ಅಥವಾ ಭಾಗಶ:ವಾಗಿ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಯಾವುದೇ ರಾಜ್ಯ ಸರ್ಕಾರಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಅದರ ಒಡೆತನವನ್ನು ಹೊಂದಿದ ಅಥವಾ ನಿಯಂತ್ರಣವನ್ನು ಹೊಂದಿದ ಯಾವುದೇ ಇತರ ಕಂಪನಿಯು ಸಿಎಜಿಯವರ ಲೆಕ್ಕಪರಿಶೋಧನೆಯ ವ್ಯಾಪ್ತಿಗೆ ಬರುತ್ತದೆ. 31 ಮಾರ್ಚ್ 2014ರಂದು ಅಥವಾ ಅದಕ್ಕೂ ಮುಂಚಿತವಾಗಿ ಪ್ರಾರಂಭಗೊಳ್ಳುವ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ಒಂದು ಕಂಪನಿಯ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯು ಕಂಪನಿಗಳ ಅಧಿನಿಯಮ, 1956ರ ಅನುವುಗಳಿಂದ ನಿಯಂತ್ರಿಸಲ್ಪಡುವುದು ಮುಂದುವರೆಯುತ್ತದೆ.

***ಶಾಸನಬದ್ಧ ಲೆಕ್ಕಪರಿಶೋಧನೆ***

**1.3**. ಸರ್ಕಾರಿ ಕಂಪನಿಗಳ ಹಣಕಾಸು ತ:ಖ್ತೆಗಳನ್ನು (ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 2(45)ರಲ್ಲಿ ವಿವರಿಸಿರುವಂತೆ) ಅಧಿನಿಯಮದ ಪರಿಚ್ಛೇದ 139(5) ಅಥವಾ (7)ರ ಅನುವುಗಳ ಪ್ರಕಾರ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವಂತಹ ಶಾಸನಬದ್ಧ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಯನ್ನು ಮಾಡುತ್ತಾರೆ. ತದನಂತರ, ಲೆಕ್ಕಪರಿಶೋಧನಾ ವರದಿಯ ಒಂದು ಪ್ರತಿಯನ್ನು ಅಧಿನಿಯಮದ ಪರಿಚ್ಛೇದ 143(5)ರ ಅಡಿಯಲ್ಲಿ ಸಿಎಜಿಯವರಿಗೆ ಸಲ್ಲಿಸಲಾಗುವುದು, ಆ ವರದಿಯಲ್ಲಿ ಇನ್ನಿತರವುಗಳ ಜೊತೆಗೆ ಕಂಪನಿಯ ಹಣಕಾಸು ತ:ಖ್ತೆಗಳು ಒಳಗೊಂಡಿರುತ್ತವೆ. ಈ ಹಣಕಾಸು ತ:ಖ್ತೆಗಳು ಅಧಿನಿಯಮದ ಪರಿಚ್ಛೇದ 143 (6)ರ ಅನುವುಗಳ ಅಡಿಯಲ್ಲಿ ಲೆಕ್ಕಪರಿಶೋಧನಾ ವರದಿಯು ಸ್ವೀಕೃತಗೊಂಡ ದಿನಾಂಕದಿಂದ ಅರವತ್ತು ದಿನಗಳ ಒಳಗೆ ಸಿಎಜಿಯವರ ಪೂರಕ–ಲೆಕ್ಕಪರಿಶೋಧನೆಗೆ ಒಳಪಡುತ್ತವೆ.

ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯು ಸಂಬಂಧಿತ ಶಾಸನಗಳಿಂದ ನಿಯಂತ್ರಿಸಲ್ಪಡುತ್ತದೆ. ಕರ್ನಾಟಕದಲ್ಲಿನ ಆರು ಶಾಸನಬದ್ಧ ನಿಗಮಗಳ ಪೈಕಿ, ನಾಲ್ಕು ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ[6] ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಏಕೈಕ ಲೆಕ್ಕಪರಿಶೋಧಕರಾಗಿರುತ್ತಾರೆ. ರಾಜ್ಯ ಉಗ್ರಾಣ ನಿಗಮ ಹಾಗೂ ರಾಜ್ಯ ಹಣಕಾಸು ನಿಗಮಗಳಿಗೆ ಸಂಬಂಧಿಸಿದಂತೆ, ಲೆಕ್ಕಪರಿಶೋಧನೆಯನ್ನು ಚಾರ್ಟರ್ಡ್ ಅಕೌಂಟೆಂಟ್‌ಗಳು ನಡೆಸುತ್ತರಾದಲ್ಲಿ ಪೂರಕ ಲೆಕ್ಕಪರಿಶೋಧನೆಯನ್ನು ಸಿಎಜಿಯವರು ನಡೆಸುತ್ತಾರೆ.

[6] ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ನಿಗಮ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹಾಗೂ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ.

***ಸರ್ಕಾರ ಹಾಗೂ ಶಾಸಕಾಂಗದ ಪಾತ್ರ***

**1.4.** ರಾಜ್ಯ ಸರ್ಕಾರವು ತನ್ನ ಆಡಳಿತಾತ್ಮಕ ಇಲಾಖೆಗಳ ಮೂಲಕ ಈ ಸಾವಉಗಳ ವ್ಯವಹಾರಗಳ ಮೇಲೆ ನಿಯಂತ್ರಣಗಳನ್ನು ಚಲಾಯಿಸುತ್ತದೆ. ಮಂಡಳಿಗೆ ಮುಖ್ಯ ವ್ಯವಸ್ಥಾಪಕರು ಹಾಗೂ ನಿರ್ದೇಶಕರುಗಳನ್ನು ಸರ್ಕಾರವು ನೇಮಕ ಮಾಡುತ್ತದೆ.

ರಾಜ್ಯ ಶಾಸಕಾಂಗವು ಈ ಸಾವಉಗಳಲ್ಲಿ ಸರ್ಕಾರದ ಹೂಡಿಕೆಗಳನ್ನು ಲೆಕ್ಕವನ್ನಿಡುವಿಕೆ ಹಾಗೂ ಬಳಸುವಿಕೆಯನ್ನು ಕೂಡ ಮೇಲ್ವಿಚಾರಣೆ ಮಾಡುತ್ತದೆ. ಇದಕ್ಕಾಗಿ, ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಜೊತೆಯಲ್ಲಿ ವಾರ್ಷಿಕ ವರದಿಗಳು ಹಾಗೂ ಸಿಎಜಿಯವರ ಟೀಕೆಟಿಪ್ಪಣಿಗಳು ಹಾಗೂ ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಅಧಿನಿಯಮದ ಪರಿಚ್ಛೇದ 394ರ ಅಡಿಯಲ್ಲಿ ಅಥವಾ ಸಂಬಂಧಿತ ಅಧಿನಿಯಮಗಳ ಅಡಿಯಲ್ಲಿ ಶಾಸಕಾಂಗದ ಮುಂದೆ ಮಂಡಿಸಲಾಗುವುದು. ಸಿಎಜಿಯವರ ಲೆಕ್ಕಪರಿಶೋಧನಾ ವರದಿಗಳನ್ನು ಸಿಎಜಿಯವರ (ಕರ್ತವ್ಯಗಳು, ಅಧಿಕಾರಗಳು ಹಾಗೂ ಸೇವಾ ಷರತ್ತುಗಳು) ಅಧಿನಿಯಮ, 1971ರ ಪರಿಚ್ಛೇದ 19ಎ ಅಡಿಯಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗುವುದು.

## ಕರ್ನಾಟಕ ಸರ್ಕಾರದ ಪಾಲು

**1.5.** ಕರ್ನಾಟಕ ಸರ್ಕಾರವು ಈ ಸಾವಉಗಳಲ್ಲಿ ಬೃಹತ್ ಮೊತ್ತದ ಹಣಕಾಸಿನ ಪಾಲನ್ನು ಹೊಂದಿದೆ. ಈ ಪಾಲು ಪ್ರಮುಖವಾಗಿ ಮೂರು ರೀತಿಗಳಲ್ಲಿದೆ:

- **ಷೇರು ಬಂಡವಾಳ ಮತ್ತು ಸಾಲಗಳು**–ಷೇರು ಬಂಡವಾಳ ನೀಡಿಕೆಯ ಜೊತೆಗೆ, ಕರ್ನಾಟಕ ಸರ್ಕಾರವು ಸಾವಉಗಳಿಗೆ ಕಾಲಾನುಕಾಲಕ್ಕೆ ಸಾಲಗಳ ರೂಪದಲ್ಲಿ ಹಣಕಾಸಿನ ನೆರವನ್ನು ಒದಗಿಸುತ್ತದೆ.
- **ವಿಶೇಷ ಹಣಕಾಸಿನ ಬೆಂಬಲ**–ಕರ್ನಾಟಕ ಸರ್ಕಾರವು ಸಾವಉಗಳಿಗೆ ಅಗತ್ಯತೆ ಉಂಟಾದಾಗಲೆಲ್ಲಾ ಅನುದಾನಗಳು ಹಾಗೂ ಸಹಾಯಧನಗಳ ರೂಪದಲ್ಲಿ ಆಯವ್ಯಯ ಬೆಂಬಲವನ್ನು ಒದಗಿಸುತ್ತದೆ.
- **ಖಾತರಿಗಳು**–ಸಾವಉಗಳು ಹಣಕಾಸು ಸಂಸ್ಥೆಗಳಿಂದ ಬಳಸಿಕೊಳ್ಳಲಾದಂತಹ ಸಾಲಗಳನ್ನು ಬಡ್ಡಿಯ ಜೊತೆಯಲ್ಲಿ ಮರುಪಾವತಿಸುವುದಕ್ಕೆ ಕರ್ನಾಟಕ ಸರ್ಕಾರವು ಖಾತರಿಗಳನ್ನು ನೀಡುತ್ತದೆ.

## ರಾಜ್ಯ ಸಾವಉಗಳಲ್ಲಿ ಹೂಡಿಕೆಗಳು

**1.6.** 31 ಮಾರ್ಚ್ 2015ರಲ್ಲಿದ್ದಂತೆ, 93 ಸಾವಉಗಳಲ್ಲಿ ಮಾಡಲಾಗಿದ್ದಂತಹ ಹೂಡಿಕೆಗಳು (ಬಂಡವಾಳ ಹಾಗೂ ದೀರ್ಘಾವಧಿ ಸಾಲಗಳು) ಈ ಕೆಳಗೆ ನೀಡಲಾಗಿರುವ ವಿವರಣೆಗಳಂತೆ ₹ 83,282.11 ಕೋಟಿ ಆಗಿತ್ತು.

**ಕೋಷ್ಟಕ ಸಂಖ್ಯೆ 1.2: ಸಾವಉಗಳಲ್ಲಿನ ಒಟ್ಟಾರೆ ಹೂಡಿಕೆಗಳು**

**(₹ ಕೋಟಿಯಲ್ಲಿ)**


| ಸಾವಉಗಳ ಮಾದರಿ | ಸರ್ಕಾರಿ ಕಂಪನಿಗಳು | | | ಶಾಸನಬದ್ಧ ನಿಗಮಗಳು | | | ಒಟ್ಟು ಮೊತ್ತ |
|---|---|---|---|---|---|---|---|
| | ಬಂಡವಾಳ | ದೀರ್ಘಾವಧಿ ಸಾಲಗಳು | ಒಟ್ಟು | ಬಂಡವಾಳ | ದೀರ್ಘಾವಧಿ ಸಾಲಗಳು | ಒಟ್ಟು | |
| ಕಾರ್ಯ ನಿರತ ಸಾವಉಗಳು | 49,092.90 | 28,800.71 | 77,893.61 | 1,942.06 | 2,863.92 | 4,805.98 | 82,699.59 |
| ಕಾರ್ಯ ಸ್ಥಗಿತ ಸಾವಉಗಳು | 160.21 | 422.31 | 582.52 | - | - | - | 582.52 |
| **ಒಟ್ಟು** | **49,253.11** | **29,223.02** | **78,476.13** | **1,942.06** | **2,863.92** | **4,805.98** | **83,282.11** |

31 ಮಾರ್ಚ್ 2015ರಲ್ಲಿದ್ದಂತೆ, ರಾಜ್ಯ ಸಾವಉಗಳಲ್ಲಿನ ಒಟ್ಟಾರೆ ಹೂಡಿಕೆಗಳ ಪೈಕಿ, ಶೇಕಡಾ 99.30ರಷ್ಟು ಕಾರ್ಯನಿರತ ಸಾವಉಗಳಲ್ಲಿ ಹಾಗೂ ಉಳಿದ ಶೇಕಡಾ 0.70ರಷ್ಟು ಹೂಡಿಕೆಗಳು ಕಾರ್ಯಸ್ಥಗಿತ ಸಾವಉಗಳಲ್ಲಿ ಇದ್ದವು. ಒಟ್ಟಾರೆ ಹೂಡಿಕೆಯು ಬಂಡವಾಳದ ಕಡೆಗೆ ಶೇಕಡಾ 61.47ರಷ್ಟು ಹಾಗೂ ಶೇಕಡಾ 38.53ರಷ್ಟು ದೀರ್ಘಾವಧಿ ಸಾಲಗಳಲ್ಲಿ ಆಗಿತ್ತು. ಹೂಡಿಕೆಯು ಈ

ಕೆಳಗಿನ ರೇಖಾಚಿತ್ರದಲ್ಲಿ ತೋರಿಸಿರುವಂತೆ 2010–11ರಲ್ಲಿದ್ದಂತಹ ₹ 58,137.26 ಕೋಟಿ ಮೊತ್ತದಿಂದ 2014–15ರಲ್ಲಿ ₹ 83,282.11 ಕೋಟಿಗೆ ಏರಿಕೆಯಾಗಿತ್ತು.

**ರೇಖಾಚಿತ್ರ ಸಂಖ್ಯೆ 1.1: ಸಾವಉಗಳಲ್ಲಿ ಒಟ್ಟಾರೆ ಹೂಡಿಕೆಗಳು**

**(₹ ಕೋಟಿಯಲ್ಲಿ)**





**1.7.** 31 ಮಾರ್ಚ್ 2015ರಲ್ಲಿದ್ದಂತೆ ರಾಜ್ಯ ಸಾವಉಗಳಲ್ಲಿನ ಹೂಡಿಕೆಗಳ ವಲಯವಾರು ಸಂಕ್ಷಿಪ್ತ ಚಿತ್ರಣವನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.3: ಸಾವಉಗಳಲ್ಲಿ ವಲಯವಾರು ಹೂಡಿಕೆ**

| ವಲಯದ ಹೆಸರು | ಸರ್ಕಾರಿ ಕಂಪನಿಗಳು | | ಶಾಸನಬದ್ಧ ನಿಗಮಗಳು | ಒಟ್ಟು | ಹೂಡಿಕೆ (₹ ಕೋಟಿಯಲ್ಲಿ) |
|---|---|---|---|---|---|
| | ಕಾರ್ಯನಿರತ | ಕಾರ್ಯಸ್ಥಗಿತ | | | |
| ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು | 12 | 5 | 1 | 18 | 249.71 |
| ಹಣಕಾಸು | 14 | - | 1 | 15 | 4,762.27 |
| ಮೂಲಭೂತ ಸೌಕರ್ಯಗಳು | 12 | - | - | 12 | 41,707.22 |
| ಉತ್ಪಾದನೆ | 19 | 7 | - | 26 | 1,062.58 |
| ವಿದ್ಯುತ್ | 12 | - | - | 12 | 33,385.63 |
| ಸೇವೆಗಳು | 3 | - | 4 | 7 | 2,114.59 |
| ಇತರೆ | 3 | - | - | 3 | 0.11 |
| **ಒಟ್ಟು** | **75** | **12** | **6** | **93** | **83,282.11** |

31 ಮಾರ್ಚ್ 2011 ಹಾಗೂ 31 ಮಾರ್ಚ್ 2015ರ ಅಂತ್ಯಕ್ಕೆ ನಾಲ್ಕು ಗಮನಾರ್ಹ ವಲಯಗಳಲ್ಲಿನ ಹೂಡಿಕೆಗಳು ಹಾಗೂ ಅವುಗಳ ಶೇಕಡಾವಾರು ವಿವರಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ಸೂಚಿಸಲಾಗಿದೆ.

**ರೇಖಾಚಿತ್ರ ಸಂಖ್ಯೆ 1.2: ಸಾವಉಗಳಲ್ಲಿ ವಲಯವಾರು ಹೂಡಿಕೆಗಳು**




ಸಾವಉಗಳಲ್ಲಿ ಹೂಡಿಕೆಗಳಿಗೆ ಸಂಬಂಧಿಸಿದಂತೆ ಮೂಲಭೂತಸೌಕರ್ಯಗಳು ಹಾಗೂ ವಿದ್ಯುತ್ ವಲಯಗಳಿಗೆ 2014–15ರಲ್ಲಿ ಅನುಕ್ರಮವಾಗಿ ಶೇಕಡಾ 50.08 ಹಾಗೂ ಶೇಕಡಾ 40.09ರಷ್ಟು ಹೂಡಿಕೆಗಳೊಂದಿಗೆ ಹೆಚ್ಚಿನ ಒತ್ತನ್ನು ನೀಡಲಾಗಿತ್ತು. 2010–11 ಮತ್ತು 2014–15ರ ನಡುವೆ ವಿದ್ಯುತ್ ಹಾಗೂ ಮೂಲಭೂತಸೌಕರ್ಯಗಳಲ್ಲಿ ಹೂಡಿಕೆಯು ಅನುಕ್ರಮವಾಗಿ ₹ 14,729.08 ಕೋಟಿ ಹಾಗೂ ₹ 10,136.16 ಕೋಟಿಯಷ್ಟು ಹೆಚ್ಚಳಗೊಂಡಿತ್ತು.

## ಪ್ರಸಕ್ತ ಸಾಲಿನಲ್ಲಿ ವಿಶೇಷ ಹಣಕಾಸು ಬೆಂಬಲಗಳು ಹಾಗೂ ಪ್ರತಿಫಲಗಳು

**1.8**. ರಾಜ್ಯ ಸರ್ಕಾರವು, ವಾರ್ಷಿಕ ಆಯವ್ಯಯದ ಮೂಲಕ ಸಾವಉಗಳಿಗೆ ವಿವಿಧ ನಮೂನೆಗಳಲ್ಲಿ ಹಣಕಾಸಿನ ಬೆಂಬಲವನ್ನು ಒದಗಿಸುತ್ತದೆ. ರಾಜ್ಯ ಸಾವಉಗಳಿಗೆ ಸಂಬಂಧಿಸಿದಂತೆ 2014–15ಕ್ಕೆ ಅಂತ್ಯಗೊಂಡಂತೆ ಕಳೆದ ಮೂರು ವರ್ಷಗಳಿಗೆ ಈಕ್ವಿಟಿ, ಸಾಲಗಳು, ಅನುದಾನಗಳು/ಸಹಾಯಧನಗಳು, ದಾಖಲೆಗಳಿಂದ ತೆಗೆದು ಹಾಕಲಾದಂತಹ (ರಿಟನ್‌ಆಫ್) ಸಾಲಗಳು ಹಾಗೂ ಮನ್ನಾ ಮಾಡಲಾದಂತಹ ಬಡ್ಡಿ ಮುಂತಾದವುಗಳ ಕಡೆಗೆ ಆಯವ್ಯಯದಿಂದ ಹೊರಹರಿದಂತಹ ಹಣಕಾಸಿನ ಸಂಕ್ಷಿಪ್ತ ವಿವರಗಳನ್ನು ಈ ಕೆಳಗೆ ನೀಡಲಾಗಿದೆ:


**ಕೋಷ್ಟಕ ಸಂಖ್ಯೆ 1.4: ಸಾವಉಗಳಿಗೆ ಆಯವ್ಯಯ ಬೆಂಬಲಕ್ಕೆ ಸಂಬಂಧಿತ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2012-13 | | 2013-14 | | 2014-15 | |
|---|---|---|---|---|---|---|---|
| | | ಸಾವಉಗಳ ಸಂಖ್ಯೆ | ಮೊತ್ತ | ಸಾವಉಗಳ ಸಂಖ್ಯೆ | ಮೊತ್ತ | ಸಾವಉಗಳ ಸಂಖ್ಯೆ | ಮೊತ್ತ |
| 1 | ಈಕ್ವಿಟಿ ಬಂಡವಾಳಕ್ಕಾಗಿ ಆಯವ್ಯಯದಿಂದ ಹೊರಹರಿವು | 23 | 4,660.59 | 21 | 4,078.15 | 22 | 3,990.66 |
| 2 | ಆಯವ್ಯಯದಿಂದ ನೀಡಲಾದಂತಹ ಸಾಲಗಳು | 3 | 11.08 | 3 | 67.55 | 5 | 38.88 |
| 3 | ಆಯವ್ಯಯದಿಂದ ಅನುದಾನಗಳು/ ಸಹಾಯಧನಗಳು | 36 | 10,387.06 | 32 | 9,365.95 | 27 | 9,927.99 |
| **4** | **ಒಟ್ಟಾರೆ ಹೊರಹರಿವು (1+2+3)** | **51** | **15,058.73** | **42** | **13,511.65** | **41** | **13,957.53** |
| 5 | ಮನ್ನ ಮಾಡಲಾಗಿರುವ ಸಾಲಗಳು ಹಾಗೂ ಬಡ್ಡಿ | - | - | - | - | 1 | 8.25 |
| 6 | ನೀಡಲಾಗಿರುವ ಖಾತರಿಗಳು | 7 | 557.19 | 12 | 1,775.65 | 9 | 3,736.46 |
| 7 | ಖಾತರಿಯ ಬದ್ಧತೆಗಳು | 20 | 3,500.88 | 21 | 4,542.73 | 15 | 7,251.35 |

ಕಳೆದ ಐದು ವರ್ಷಗಳಲ್ಲಿ ಈಕ್ವಿಟಿ, ಸಾಲಗಳು, ಅನುದಾನಗಳು/ಸಹಾಯಧನಗಳು, ಮುಂತಾದವುಗಳ ಕಡೆಗೆ ಆಯವ್ಯಯದಿಂದ ಹೊರಹರಿದಂತಹ ಹಣಕಾಸಿನ ವಿವರಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ನೀಡಲಾಗಿದೆ.

**ರೇಖಾಚಿತ್ರ ಸಂಖ್ಯೆ 1.3: ಈಕ್ವಿಟಿ, ಸಾಲಗಳು, ಅನುದಾನಗಳು ಹಾಗೂ ಸಹಾಯಧನಗಳಿಗೆ ಕಡೆಗೆ ಆಯವ್ಯಯದಿಂದ ಹಣಕಾಸಿನ ಹೊರಹರಿವು**




ಈಕ್ವಿಟಿ, ಸಾಲಗಳು ಹಾಗೂ ಅನುದಾನಗಳು/ಸಹಾಯಧನಗಳಿಗೆ ಸಂಬಂಧಿಸಿದಂತೆ ಆಯವ್ಯಯ ಬೆಂಬಲವು 2010–11ರಲ್ಲಿ ನೀಡಲಾಗಿದ್ದಂತಹ ₹ 8,880.72 ಕೋಟಿಯಿಂದ 2014–15ರಲ್ಲಿ ₹ 13,957.53 ಕೋಟಿಗೆ ಹೆಚ್ಚಳಗೊಂಡಿತು.

### ಸಾಲಗಳಿಗಾಗಿ ಖಾತರಿಗಳು ಹಾಗೂ ಬಾಕಿಯಿರುವ ಖಾತರಿ ಕಮಿಷನ್

**1.9.** ಸಾವಉಗಳು ಬ್ಯಾಂಕುಗಳಿಂದ ಹಾಗೂ ಹಣಕಾಸು ತ:ಖ್ತೆಗಳಿಂದ ಹಣಕಾಸಿನ ನೆರವನ್ನು ಪಡೆಯುವುದಕ್ಕಾಗಿ, ರಾಜ್ಯ ಸರ್ಕಾರವು ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಗರಿಷ್ಠ ಮಿತಿ ಅಧಿನಿಯಮ, 1999ರ (2002ರ ಕಾಯಿದೆ 15ರ ಮೂಲಕ ತಿದ್ದುಪಡಿಗೊಂಡಂತೆ) ಅಡಿಯಲ್ಲಿ ಖಾತರಿಯನ್ನು ನೀಡುತ್ತದೆ. ಸರ್ಕಾರವು ಖಾತರಿ ಕಮಿಷನ್ನಾಗಿ ಶೇಕಡಾ ಒಂದನ್ನು ವಿಧಿಸುತ್ತದೆ, ಅದನ್ನು ಯಾವುದೇ ಸಂದರ್ಭದಲ್ಲಿಯೂ ಮನ್ನಾ ಮಾಡುವಂತಿಲ್ಲ. ಖಾತರಿ ಬದ್ಧತೆಯು 2012–13ರಲ್ಲಿದ್ದಂತಹ ₹ 3,500.88 ಕೋಟಿಯಿಂದ 2014–15ರಲ್ಲಿ ₹ 7,251.35 ಕೋಟಿಗೆ ಹೆಚ್ಚಳಗೊಂಡಿತು. ಒಂಬತ್ತು ಸಾವಉಗಳು 2014–15ರಲ್ಲಿ ₹ 37.27 ಕೋಟಿ ಮೊತ್ತದಷ್ಟು ಖಾತರಿ ಕಮಿಷನನ್ನು ಪಾವತಿಸಿದ್ದು, ಅದೇ ವರ್ಷದಲ್ಲಿ 21 ಸಾವಉಗಳು[7] ಖಾತರಿ ಶುಲ್ಕವನ್ನು/ಕಮಿಷನನ್ನು ಪಾವತಿಸಲಿಲ್ಲ ಹಾಗೂ ಅದಕ್ಕೆ ಪ್ರತಿಯಾಗಿ ಕ್ರೋಡೀಕೃತಗೊಂಡಿದ್ದಂತಹ ಖಾತರಿ ಶುಲ್ಕಗಳ/ಕಮಿಷನ್ನಿನ ಮೊತ್ತವು ₹ 168.66 ಕೋಟಿ (31 ಮಾರ್ಚ್ 2015ರಲ್ಲಿದ್ದಂತೆ ಆಗಿತ್ತು.

[7] ದೊಡ್ಡ ಪ್ರಮಾಣದಲ್ಲಿ ಬಾಕಿಗಳನ್ನು ಹೊಂದಿದ್ದಂತಹ ಸಾವಉಗಳೆಂದರೆ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (₹ 51.26 ಕೋಟಿ), ಕರ್ನಾಟಕ ನೀರಾವರಿ ನಿಗಮ ನಿಯಮಿತ (₹ 26.06 ಕೋಟಿ), ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತ (₹ 20.35 ಕೋಟಿ), ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ (₹ 19.56 ಕೋಟಿ) ಹಾಗೂ ಕರ್ನಾಟಕ ರಾಜ್ಯ ಹಣಕಾಸು ನಿಗಮ (₹ 17.35 ಕೋಟಿ). ಉಳಿದ ಸಾವಉಗಳಿಗೆ ಸಂಬಂಧಿಸಿದಂತೆ ಇದ್ದಂತಹ ಬಾಕಿಗಳು ₹ 34.08 ಕೋಟಿ ಆಗಿತ್ತು.

## ಹಣಕಾಸು ತಃಖ್ತೆಗಳ ಜೊತೆ ಸಮನ್ವಯಗೊಳಿಸುವಿಕೆ

**1.10**. ರಾಜ್ಯ ಸಾವಉಗಳ ದಾಖಲೆಗಳ ಪ್ರಕಾರ ಬಾಕಿ ಇರುವಂತಹ ಈಕ್ವಿಟಿ, ಸಾಲಗಳು ಹಾಗೂ ಖಾತರಿಗಳಿಗೆ ಸಂಬಂಧಿತ ಅಂಕಿಸಂಖ್ಯೆಗಳು ರಾಜ್ಯ ಹಣಕಾಸು ತ:ಖ್ತೆಗಳಲ್ಲಿ ಕಂಡುಬರುವ ಅಂಕಿಸಂಖ್ಯೆಗಳ ಜೊತೆ ತಾಳೆ ಹೊಂದಬೇಕು. ಒಂದು ವೇಳೆ, ಅಂಕಿಸಂಖ್ಯೆಗಳು ತಾಳೆ ಹೊಂದದಿದ್ದಲ್ಲಿ, ಸಂಬಂಧಿತ ಸಾವಉಗಳು ಹಾಗೂ ಹಣಕಾಸು ಇಲಾಖೆಯು ವ್ಯತ್ಯಾಸಗಳನ್ನು ಸಮನ್ವಯಗೊಳಿಸತಕ್ಕದ್ದು. ಈ ನಿಟ್ಟಿನಲ್ಲಿ 31 ಮಾರ್ಚ್ 2015ರಲ್ಲಿದ್ದಂತಹ ಸ್ಥಿತಿಗತಿಯನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.5: ಹಣಕಾಸು ತ:ಖ್ತೆಗಳು ಹಾಗೂ ಅವುಗಳಿಗೆ ಅಭಿಮುಖವಾಗಿ ಸಾವಉಗಳ ದಾಖಲೆಗಳ ಪ್ರಕಾರ ಬಾಕಿಯಿರುವಂತಹ ಈಕ್ವಿಟಿ, ಸಾಲಗಳು ಹಾಗೂ ಖಾತರಿಗಳು**

(₹ ಕೋಟಿಯಲ್ಲಿ)

| ಬಾಕಿಗಳು ಸಂಬಂಧಿಸಿರುವುದು | ಹಣಕಾಸು ತ:ಖ್ತೆಗಳ ಪ್ರಕಾರ ಮೊತ್ತ | ಸಾವಉಗಳ ದಾಖಲೆಗಳ ಪ್ರಕಾರ ಮೊತ್ತ | ವ್ಯತ್ಯಾಸ |
|---|---|---|---|
| 1 | 2 | 3 | 4 = 2-3 |
| ಈಕ್ವಿಟಿ | 55,651.51 | 48,600.17 | 7,051.34 |
| ಸಾಲಗಳು | 1,683.90 | 1,434.92 | 248.98 |
| ಖಾತರಿಗಳು | 8,299.58 | 7,251.35 | 1,048.23 |

83 ಸಾವಉಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸಗಳಿದ್ದವು. ಸರ್ಕಾರ ಹಾಗೂ ಸಾವಉಗಳು ವ್ಯತ್ಯಾಸಗಳನ್ನು ಒಂದು ಕಾಲಮಿತಿಯ ರೀತಿಯಲ್ಲಿ ಸಮನ್ವಯಗೊಳಿಸಲು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕು.

## ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿನ ಬಾಕಿಗಳು

**1.11**. ಅಧಿನಿಯಮದ ಪರಿಚ್ಛೇದ 96(1)ರ ಅನುವುಗಳ ಪ್ರಕಾರ ಕಂಪನಿಗಳ ಹಣಕಾಸು ತ:ಖ್ತೆಗಳನ್ನು ಪ್ರತಿಯೊಂದು ಹಣಕಾಸು ವರ್ಷಕ್ಕೆ ಸಂಬಂಧಿಸಿದ ಹಣಕಾಸು ವರ್ಷವು ಮುಕ್ತಾಯಗೊಂಡ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಅಂದರೆ ಸೆಪ್ಟಂಬರ್ ಅಂತ್ಯದ ಒಳಗೆ ಅಂತಿಮಗೊಳಿಸುವ ಅಗತ್ಯತೆ ಇರುತ್ತದೆ. ಇದನ್ನು ತಪ್ಪಿದಲ್ಲಿ ಅಧಿನಿಯಮದ ಪರಿಚ್ಛೇದ 99ರ ಅಡಿಯಲ್ಲಿ ದಂಡವನ್ನು ವಿಧಿಸಬಹುದು. ಅದೇ ರೀತಿ, ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ, ಅವುಗಳ ಸಂಬಂಧಿತ ಶಾಸನಗಳ ಅನುವುಗಳ ಪ್ರಕಾರ ಅವುಗಳ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ ಲೆಕ್ಕಪರಿಶೋಧನೆಗೆ ಒಳಪಡಿಸತಕ್ಕದ್ದು ಹಾಗೂ ಶಾಸಕಾಂಗದ ಮುಂದೆ ಮಂಡಿಸತಕ್ಕದ್ದು.

ಈ ಕೆಳಗಿನ ಕೋಷ್ಟಕವು, 30 ಸೆಪ್ಟಂಬರ್ 2015ರಲ್ಲಿದ್ದಂತೆ, ಕಾರ್ಯನಿರತ ಸಾವಉಗಳು ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಿಕೆಯ ಸಾಧಿಸಿದ ಪ್ರಗತಿಯ ವಿವರಗಳನ್ನು ಒದಗಿಸುತ್ತದೆ.

**ಕೋಷ್ಟಕ ಸಂಖ್ಯೆ 1.6: ಕಾರ್ಯನಿರತ ಸಾವಉಗಳ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವ ಸಂಬಂಧದ ಸ್ಥಿತಿಗತಿಗಳು**

| ಕ್ರಮ ಸಂಖ್ಯೆ | ವಿವರಗಳು | 2010-11 | 2011-12 | 2012-13 | 2013-14 | 2014-15 |
|---|---|---|---|---|---|---|
| 1 | ಕಾರ್ಯನಿರತ ಸಾವಉಗಳ ಸಂಖ್ಯೆ | 75 | 76 | 79 | 81 | 81 |
| 2 | ಪ್ರಸಕ್ತ ಸಾಲಿನಲ್ಲಿ ಅಂತಿಮಗೊಳಿಸಲಾದ ಲೆಕ್ಕಪತ್ರಗಳ ಸಂಖ್ಯೆ | 69 | 59 | 81 | 73 | 82 |
| 3 | ಬಾಕಿಯಿರುವ ಲೆಕ್ಕಪತ್ರಗಳ ಸಂಖ್ಯೆ | 25 | 42 | 40 | 48 | 44[8] |
| 4 | ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿ ಬಾಕಿ ಉಳಿಸಿಕೊಂಡಿರುವ ಸಾವಉಗಳ ಸಂಖ್ಯೆ | 24 | 37 | 36 | 41 | 38 |
| 5 | ಬಾಕಿಗಳ ವಿಸ್ತಾರ (ವರ್ಷಗಳಲ್ಲಿ) | 1 ರಿಂದ 2 ವರ್ಷಗಳು | 1 ರಿಂದ 2 ವರ್ಷಗಳು | 1 ರಿಂದ 2 ವರ್ಷಗಳು | 1 ರಿಂದ 3 ವರ್ಷಗಳು | 1 ರಿಂದ 2 ವರ್ಷಗಳು |

[8] ಎರಡು ಸಾವಉಗಳು (ಕರ್ನಾಟಕ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಬೆಂಗಳೂರು ಉಪನಗರ ರೈಲು ಕಂಪನಿ ನಿಯಮಿತ) ತಮ್ಮ ಲೆಕ್ಕಪತ್ರಗಳನ್ನು ಇನ್ನೂ ಅಂತಿಮಗೊಳಿಸಬೇಕಾಗಿದೆ. ಮುಂದುವರೆದು, ಕರ್ನಾಟಕ ಇಎಂಟಿಎ ಕಲ್ಲಿದ್ದಲು ಗಣಿಗಳು ನಿಯಮಿತವನ್ನು ಪ್ರಸಕ್ತ ಸಾಲಿನಲ್ಲಿ ಪರ್ಯವಸಾನಗೊಳಿಸಲಾಗಿದೆ, ಅದು ಹೊಂದಿರುವ ಬಾಕಿಗಳನ್ನು ಕೈಬಿಡಲಾಗಿದೆ.

ಪ್ರಸಕ್ತ ಸಾಲಿನಲ್ಲಿ, 82 ಲೆಕ್ಕಪತ್ರಗಳನ್ನು ಅಂತಿಮಗೊಳಿಸಲಾಗಿತ್ತು. ಅವು 6 ಶಾಸನಬದ್ಧ ನಿಗಮಗಳ 7 ಲೆಕ್ಕಪತ್ರಗಳನ್ನು ಒಳಗೊಂಡಿದ್ದವು. ಬಾಕಿ ಇರುವ ಲೆಕ್ಕಪತ್ರಗಳ ಸಂಖ್ಯೆಯು 25ರಿಂದ (2010–11) 44ಕ್ಕೆ (2014–15) ಏರಿಕೆಯಾಗಿತ್ತು. 44 ಲೆಕ್ಕಪತ್ರಗಳ ಪೈಕಿ, 39 ಲೆಕ್ಕಪತ್ರಗಳು ಕಾರ್ಯನಿರತ ಸರ್ಕಾರಿ ಕಂಪನಿಗಳಿಗೆ ಸೇರಿದ್ದವು, ಅವು ಒಂದು ಮತ್ತು ಎರಡು ವರ್ಷಗಳ ನಡುವೆ ಬಾಕಿಗಳನ್ನು ಹೊಂದಿದ್ದವು. ಬಾಕಿಯಲ್ಲಿ ಐದು ಶಾಸನಬದ್ಧ ನಿಗಮಗಳ ಐದು ಲೆಕ್ಕಪತ್ರಗಳೂ ಸೇರಿದ್ದವು.

ಈ ಸಾವಲುಗಳ ಕಾರ್ಯಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವಲ್ಲಿ ಹಾಗೂ ಲೆಕ್ಕಪತ್ರಗಳನ್ನು ನಿರ್ದಿಷ್ಟ ಅವಧಿಯ ಒಳಗೆ ಅಂತಿಮಗೊಳಿಸುವುದನ್ನು ಹಾಗೂ ಅವುಗಳನ್ನು ಸಾವಲುಗಳು ಅಳವಡಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಆಡಳಿತಾತ್ಮಕ ಇಲಾಖೆಗಳು ಜವಾಬ್ದಾರಿಯುತವಾಗಿರುತ್ತವೆ. ಲೆಕ್ಕಪತ್ರಗಳಲ್ಲಿನ ಬಾಕಿಗಳನ್ನು ಸಮಾಪನಗೊಳಿಸುವುದಕ್ಕಾಗಿ, ಪ್ರಧಾನ ಮಹಾಲೇಖಾಪಾಲರು/ಮಹಾಲೇಖಾಪಾಲರು ರಾಜ್ಯ ಸರ್ಕಾರ/ಆಡಳಿತಾತ್ಮಕ ಇಲಾಖೆಗಳ ಜೊತೆ ನಿಯತಕಾಲಿಕವಾಗಿ ಈ ವಿಷಯವನ್ನು ಕೈಗೆತ್ತಿಕೊಂಡಿದ್ದರು.

**1.12.** **ಅನುಬಂಧ–1ರಲ್ಲಿ** ವಿವರಿಸಿರುವಂತೆ ಲೆಕ್ಕಪತ್ರಗಳನ್ನು ಅಂತಿಮಗೊಳಿಸದಿದ್ದಂತಹ 38 ಸಾವಲುಗಳಲ್ಲಿ ರಾಜ್ಯ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ₹ 8,305.33 ಕೋಟಿ ಹೂಡಿಕೆ ಮಾಡಿತ್ತು. ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿ ಹಾಗೂ ತದನಂತರದಲ್ಲಿ ಅವುಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸುವಲ್ಲಿನ ಅನುಪಸ್ಥಿತಿಯಲ್ಲಿ, ಮಾಡಲಾದಂತಹ ಹೂಡಿಕೆಗಳು ಹಾಗೂ ಭರಿಸಲಾದಂತಹ ವೆಚ್ಚಗಳನ್ನು ಸಮರ್ಪಕವಾಗಿ ಲೆಕ್ಕ ಇಡಲಾಗಿದೆಯೇ ಹಾಗೂ ಯಾವ ಉದ್ದೇಶಕ್ಕಾಗಿ ಹೂಡಿಕೆಯನ್ನು ಮಾಡಲಾಗಿದೆಯೋ ಆ ಉದ್ದೇಶವು ಈಡೇರಿತೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಇದರಿಂದಾಗಿ ಅಂತಹ ಸಾವಲುಗಳಲ್ಲಿ ಸರ್ಕಾರದ ಹೂಡಿಕೆಯು ರಾಜ್ಯ ಶಾಸಕಾಂಗದ ನಿಯಂತ್ರಣದ ಹೊರಗೆ ಉಳಿದುಕೊಂಡಿದೆ.

**1.13**. ಮೇಲಿನದಷ್ಟೇ ಅಲ್ಲದೇ, 30 ಸೆಪ್ಟಂಬರ್ 2015ರಲ್ಲಿದ್ದಂತೆ, ಕಾರ್ಯಸ್ಥಗಿತ ಸಾವಲುಗಳು ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿ ಬಾಕಿ ಉಳಿಸಿ 12 ಕಾರ್ಯಸ್ಥಗಿತ ಸಾವಲುಗಳ ಪೈಕಿ, ಐದು ಸಾವಲುಗಳು ತಮ್ಮ ವ್ಯವಹಾರವನ್ನು ಸಮಾಪನಗೊಳಿಸುವ ಹಂತದಲ್ಲಿದ್ದವು ಹಾಗೂ ಅವುಗಳ ಲೆಕ್ಕಪತ್ರಗಳು ಹತ್ತರಿಂದ ಹನ್ನೆರಡು ವರ್ಷಗಳವರೆಗೂ ಅಂತಿಮಗೊಳಿಸುವಲ್ಲಿ ಬಾಕಿ ಇದ್ದವು. ಉಳಿದ ಏಳು ಕಾರ್ಯಸ್ಥಗಿತ ಸಾವಲುಗಳ ಪೈಕಿ, ಕೇವಲ ಎರಡು ಸಾವಲುಗಳು[9] ಮಾತ್ರ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿ ಬಾಕಿ ಉಳಿಸಿಕೊಂಡಿದ್ದವು.

**ಕೋಷ್ಟಕ ಸಂಖ್ಯೆ 1.7: ಕಾರ್ಯಸ್ಥಗಿತ ಸಾವಲುಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿನ ಬಾಕಿಗಳಿಗೆ ಸಂಬಂಧಿಸಿದ ಸ್ಥಿತಿಗತಿ**

| ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆ | ಲೆಕ್ಕಪತ್ರಗಳು ಬಾಕಿ ಇದ್ದಂತಹ ಅವಧಿ | ಲೆಕ್ಕಪತ್ರಗಳು ಬಾಕಿಯಿದ್ದಂತಹ ವರ್ಷಗಳ ಸಂಖ್ಯೆ |
|---|---|---|
| 5 | - | - |
| 1 | 2014-15 | 1 |
| 1 | 2013-14 to 2014-15 | 2 |
| 1 | 2005-06 to 2014-15 | 10 |
| 2 | 2004-05 to 2014-15 | 11 |
| 2 | 2003-04 to 2014-15 | 12 |

**ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಮಂಡನೆ**

**1.14**. ಶಾಸನಬದ್ಧ ನಿಗಮಗಳ ಲೆಕ್ಕಪತ್ರಗಳ ಮೇಲೆ ಸಿಎಜಿಯವರು ನೀಡಿರುವ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದ ಮುಂದೆ ಮಂಡಿಸಿರುವ (30 ಸೆಪ್ಟೆಂಬರ್ 2015ರವರೆಗೆ) ಕುರಿತಾದ ಸ್ಥಿತಿಗತಿಯನ್ನು ಈ ಕೆಳಗೆ ತೋರಿಸಲಾಗಿದೆ.

[9] ಕರ್ನಾಟಕ ಕೃಷಿ ಕೈಗಾರಿಕೆಗಳ ನಿಗಮ ಹಾಗೂ ವಿಜಯನಗರ ಉಕ್ಕು ನಿಯಮಿತ.

**ಕೋಷ್ಟಕ ಸಂಖ್ಯೆ 1.8: ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದ ಮುಂದೆ ಮಂಡಿಸಿರುವುದಕ್ಕೆ ಸಂಬಂಧಿತ ಸ್ಥಿತಿಗತಿ**

| ಕ್ರಮ ಸಂಖ್ಯೆ | ಶಾಸನಬದ್ಧ ನಿಗಮದ ಹೆಸರು | ಯಾವ ವರ್ಷದ ವರೆಗೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದ ಮುಂದೆ ಮಂಡಿಸಲಾಗಿದೆ[10] | ಯಾವ ವರ್ಷಕ್ಕೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದ ಮುಂದೆ ಮಂಡಿಸಿಲ್ಲ | |
|---|---|---|---|---|
| | | | ಪ್ರತ್ಯೇಕ ಲೆಕ್ಕ–ಪರಿಶೋಧನಾ ವರದಿಯ ವರ್ಷ | ಸರ್ಕಾರಕ್ಕೆ ಸಲ್ಲಿಸಲಾದಂತಹ ದಿನಾಂಕ/ಪ್ರಸ್ತುತ ಸ್ಥಿತಿಗತಿ (ಡಿಸೆಂಬರ್ 2015) |
| 1 | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ | 2013-14 | 2014-15 | ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರಕ್ಕೆ 23.10.2015ರಂದು ಸಲ್ಲಿಸಲಾಯಿತು. |
| 2 | ಬೆಂಗಳೂರು ಮಹಾನಗರ ಸಾರಿಗೆ ನಿಗಮ | 2013-14 | 2014-15 | ಲೆಕ್ಕಪರಿಶೋಧನೆಯು ಪ್ರಗತಿಯಲ್ಲಿದೆ |
| 3 | ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ | 2013-14 | 2014-15 | ಲೆಕ್ಕಪರಿಶೋಧನೆಯು ಪ್ರಗತಿಯಲ್ಲಿದೆ |
| 4 | ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ | 2013-14 | 2014-15 | ಪ್ರತ್ಯೇಕ ಲೆಕ್ಕಪರಿಶೋಧನೆಯನ್ನು ಕರ್ನಾಟಕ ಸರ್ಕಾರಕ್ಕೆ 31.12.2015ರಂದು ಸಲ್ಲಿಸಲಾಗಿದೆ. |
| 5 | ಕರ್ನಾಟಕ ರಾಜ್ಯ ಹಣಕಾಸು ನಿಗಮ | 2013-14 | 2014-15 | ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರಕ್ಕೆ 13.10.2015ರಂದು ಸಲ್ಲಿಸಲಾಗಿದೆ. |

**ಲೆಕ್ಕಪತ್ರಗಳನ್ನು ಅಂತಿಮಗೊಳಿಸದಿರುವುದರ ಪರಿಣಾಮ**

**1.15**. ಮೇಲೆ ಸ್ಪಷ್ಟಪಡಿಸಿರುವಂತೆ (ಕಂಡಿಕೆ 1.11ರಿಂದ 1.13), ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿನ ವಿಳಂಬವು ಸಂಬಂಧಿತ ಶಾಸನಗಳ ಅನುವುಗಳ ಉಲ್ಲಂಘನೆಯಾಗುವುದಲ್ಲದೇ ವಂಚನೆ ಹಾಗೂ ಸಾರ್ವಜನಿಕ ಹಣಕಾಸಿನ ಸೋರಿಕೆಯ ಸಂಭಾವ್ಯ ಅಪಾಯವಾಗಿ ಪರಿಣಮಿಸಬಹುದು. ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿನ ಬಾಕಿಗಳ ಕಾರಣ 2014–15 ಸಾಲಿನಲ್ಲಿ ರಾಜ್ಯ ನಿವ್ವಳ ದೇಶೀಯ ಉತ್ಪನ್ನಕ್ಕೆ ಸಾವಉಗಳ ವಾಸ್ತವಿಕ ಕಾಣಿಕೆಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ ಹಾಗೂ ರಾಜ್ಯದ ವರಮಾನಕ್ಕೆ ಅವುಗಳ ಕಾಣಿಕೆಯನ್ನು ರಾಜ್ಯ ಶಾಸಕಾಂಗಕ್ಕೆ ವರದಿ ಮಾಡಲೂ ಇಲ್ಲ.

ಆದ್ದರಿಂದ, ಈ ಕೆಳಗಿನ ಶಿಫಾರಸುಗಳನ್ನು ಮಾಡಲಾಗುತ್ತಿದೆ.

- ಬಾಕಿಗಳ ವಿಲೇವಾರಿಯನ್ನು ಮೇಲುಸ್ತುವಾರಿ ಮಾಡುವ ಸಲುವಾಗಿ ಸರ್ಕಾರವು ಒಂದು ಕೋಶವನ್ನು ಸ್ಥಾಪಿಸಬೇಕು ಹಾಗೂ ವೈಯಕ್ತಿಕ ಕಂಪನಿಗಳಿಗೆ ಗುರಿಗಳನ್ನು ನಿಗದಿಪಡಿಸಬೇಕು, ಅವುಗಳನ್ನು ಕೋಶವು ಮೇಲ್ವಿಚಾರಣೆ ಮಾಡಬೇಕು.
- ಸಿಬ್ಬಂದಿಯು ಅಸಮರ್ಪಕವಾಗಿರುವಲ್ಲೆಲ್ಲಾ ಅಥವಾ ಅವರಲ್ಲಿ ನೈಪುಣ್ಯತೆಯ ಕೊರತೆಯಿದ್ದಲ್ಲಿ, ಲೆಕ್ಕಪತ್ರಗಳ ತಯಾರಿಕೆಗೆ ಸಂಬಂಧಿತ ಕೆಲಸಕಾರ್ಯವನ್ನು ಹೊರಗುತ್ತಿಗೆಗೆ ನೀಡುವುದನ್ನು ಸರ್ಕಾರವು ಪರಿಗಣಿಸಬೇಕು.

**ಇತ್ತೀಚೆಗೆ ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ಸಾವಉಗಳ ಕಾರ್ಯನಿರ್ವಹಣೆ**

**1.16**. ಕಾರ್ಯನಿರತ ಸರ್ಕಾರಿ ಕಂಪನಿಗಳು ಹಾಗೂ ಶಾಸನಬದ್ಧ ನಿಗಮಗಳ ಹಣಕಾಸಿನ ಸ್ಥಿತಿಗತಿಗಳ ಹಾಗೂ ಕಾರ್ಯನಿರ್ವಹಣೆಯ ಫಲಿತಾಂಶಗಳನ್ನು **ಅನುಬಂಧ–2ರಲ್ಲಿ** ವಿವರಿಸಲಾಗಿದೆ. ರಾಜ್ಯದ ಒಟ್ಟು ದೇಶೀಯ ಉತ್ಪನ್ನಕ್ಕೆ ಹೋಲಿಸಿದಂತೆ ಸಾವಉಗಳ ವಹಿವಾಟಿನ ಅನುಪಾತವು ರಾಜ್ಯದ ಆರ್ಥಿಕತೆಯಲ್ಲಿ ಸಾವಉಗಳ ಕಾಣಿಕೆಯ ವಿಸ್ತಾರವನ್ನು ತೋರಿಸುತ್ತದೆ. 2014–15ಕ್ಕೆ ಅಂತ್ಯಗೊಂಡಂತಹ ಐದು

[10] ಎಲ್ಲಾ ಐದು ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ 2013–14 ಸಾಲಿನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡನೆಗಾಗಿ ಕಳುಹಿಸಲಾಗಿದೆ. ಅವುಗಳ ಮಂಡನೆಯ ಬಗ್ಗೆ ಮಾಹಿತಿಯನ್ನು ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2015).

ವರ್ಷಗಳ ಅವಧಿಗೆ, ಕಾರ್ಯನಿರತ ಸಾವಲುಗಳ ವಹಿವಾಟು ಹಾಗೂ ರಾಜ್ಯದ ಒಟ್ಟು ದೇಶೀಯ ಉತ್ಪನ್ನದ ವಿವರಗಳನ್ನು ಈ ಕೆಳಗಿನ ಕೋಷ್ಟಕವು ಒದಗಿಸುತ್ತದೆ.

**ಕೋಷ್ಟಕ ಸಂಖ್ಯೆ 1.9: ಕಾರ್ಯನಿರತ ಸಾವಲುಗಳ ವಹಿವಾಟು ಹಾಗೂ ಅದಕ್ಕೆ ಅಭಿಮುಖವಾಗಿ ರಾಜ್ಯದ ಒಟ್ಟು ದೇಶೀಯ ಉತ್ಪನ್ನದ ವಿವರಗಳು**


**(₹ ಕೋಟಿಯಲ್ಲಿ)**

| ವಿವರಗಳು | 2010-11 | 2011-12 | 2012-13 | 2013-14 | 2014-15 |
|---|---|---|---|---|---|
| ವಹಿವಾಟು[11] | 41,493.51 | 34,490.58 | 37,867.13 | 44,908.32 | 48,765.18 |
| ರಾಜ್ಯದ ದೇಶೀಯ ಉತ್ಪನ್ನ | 4,10,703.00 | 4,55,212.00 | 5,22,673.00 | 6,14,607.00 | 6,85,207.00 |
| ರಾಜ್ಯದ ದೇಶೀಯ ಉತ್ಪನ್ನಕ್ಕೆ ಹೋಲಿಸಿದಲ್ಲಿ ಶೇಕಡಾವಾರು ವಹಿವಾಟು | 10.10 | 7.58 | 7.24 | 7.31 | 7.12 |

ರಾಜ್ಯದ ದೇಶೀಯ ಉತ್ಪನ್ನಕ್ಕೆ ಹೋಲಿಸಿದಲ್ಲಿ ವಹಿವಾಟು 2010–11ರಲ್ಲಿದ್ದಂತಹ ಶೇಕಡಾ 10.10ರಿಂದ 2014–15ರಲ್ಲಿ ಶೇಕಡಾ 7.12ಕ್ಕೆ ಇಳಿಕೆಯಾಯಿತು.

**1.17**. ರಾಜ್ಯದ ಕಾರ್ಯನಿರತ ಸಾವಲುಗಳು 2010–11ರಿಂದ 2014–15ರಲ್ಲಿ ಒಟ್ಟಾರೆಗಳಿಸಿದ (ಭರಿಸಿದ) ಲಾಭವನ್ನು (ನಷ್ಟಗಳನ್ನು) ಈ ಕೆಳಗಿನ ರೇಖಾಚಿತ್ರದಲ್ಲಿ ನೀಡಲಾಗಿದೆ.

**ರೇಖಾಚಿತ್ರ ಸಂಖ್ಯೆ 1.4: ಕಾರ್ಯನಿರತ ಸಾವಲುಗಳ ಲಾಭ/ನಷ್ಟ**




**(ಅಂಕಣಗಳಲ್ಲಿರುವ ಅಂಕಿಸಂಖ್ಯೆಗಳು ಸಂಬಂಧಿತ ಸಾಲುಗಳಲ್ಲಿನ ಕಾರ್ಯನಿರತ ಸಾವಲುಗಳ ಸಂಖ್ಯೆಯನ್ನು ತೋರಿಸುತ್ತದೆ.) (₹ ಕೋಟಿಯಲ್ಲಿ)**

[11] ಇತ್ತೀಚೆಗೆ ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ವಹಿವಾಟು.

ಇತ್ತೀಚೆಗೆ ಅಂತಿಮಗೊಳಿಸಲಾದ ಲೆಕ್ಕಪತ್ರಗಳ ಪ್ರಕಾರ, 81 ಕಾರ್ಯನಿರತ ಸಾವಉಗಳ ಪೈಕಿ 50 ಸಾವಉಗಳು ₹ 1,438.53 ಕೋಟಿ ಲಾಭವನ್ನು ಗಳಿಸಿದ್ದವು ಹಾಗೂ 21 ಸಾವಉಗಳು ₹ 899.59 ಕೋಟಿ ನಷ್ಟವನ್ನು ಅನುಭವಿಸಿದ್ದವು. ಮುಂದುವರೆದು, ಅನುಕ್ರಮವಾಗಿ ಫೆಬ್ರವರಿ 2014, ಮಾರ್ಚ್ 2014, ಜೂನ್ 2014 ಹಾಗೂ ಮಾರ್ಚ್ 2015ರಲ್ಲಿ ಸ್ಥಾಪಿಸಲಾದಂತಹ ಕರ್ನಾಟಕ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಉಪನಗರ ರೈಲು ಕಂಪನಿ ನಿಯಮಿತ, ಕರ್ನಾಟಕ ಗಣಿಗಾರಿಕೆ ಮತ್ತು ಪರಿಸರ ಮರುಸ್ಥಾಪನೆ ನಿಗಮ ನಿಯಮಿತ ಹಾಗೂ ಕರ್ನಾಟಕ ಸೌರಶಕ್ತಿ ವಿದ್ಯುತ್ ಅಭಿವೃದ್ಧಿ ನಿಗಮ ನಿಯಮಿತ, ಇವು ತಮ್ಮ ಮೊದಲ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿರಲಿಲ್ಲ. ಮೂರು ಕಂಪನಿಗಳು[12] ಲಾಭ ಮತ್ತು ನಷ್ಟ ತ:ಖ್ತೆಯನ್ನು ತಯಾರಿಸಿರಲಿಲ್ಲ ಹಾಗೂ ಕೇವಲ ಕಾರ್ಯಾಚರಣೆ–ಪೂರ್ವ ವೆಚ್ಚಗಳ ತ:ಖ್ತೆಯನ್ನು ಹೊಂದಿದ್ದವು. ಒಂದು ಕಂಪನಿಯು (ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ) ಆದಾಯ ಮತ್ತು ವೆಚ್ಚ ತ:ಖ್ತೆಯನ್ನು ತಯಾರಿಸಿತ್ತು ಹಾಗೂ ಆದಾಯಕ್ಕಿಂತ ಅಧಿಕವಾಗಿದ್ದಂತಹ ವೆಚ್ಚವನ್ನು ಬಂಡವಾಳೀಕರಿಸಿತ್ತು. ಮತ್ತೊಂದು ಕಂಪನಿಯು (ಕರ್ನಾಟಕ ಔದ್ಯೋಗಿಕ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ) ಆದಾಯ ಮತ್ತು ವೆಚ್ಚ ತ:ಖ್ತೆಯನ್ನು ತಯಾರಿಸಿತ್ತು. ಒಂದು ಕಂಪನಿಯು (ಕರ್ನಾಟಕ ನಗರ ಮೂಲಭೂತಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ) ಭರಿಸಲಾಗಿದ್ದಂತಹ ನಿವ್ವಳ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ವ್ಯವಸ್ಥಾಪನಾ ಶುಲ್ಕವನ್ನು ಕೋರುವುದರ ಮೂಲಕ ಗಳಿಸಲಾದಂತಹ ಲಾಭವನ್ನು ಶೂನ್ಯ ಎಂಬುದಾಗಿ ತೋರಿಸಿತ್ತು.

ಲಾಭಕ್ಕೆ ಪ್ರಮುಖ ಕೊಡುಗೆಯನ್ನು ನೀಡಿದ ಕಂಪನಿಗಳೆಂದರೆ ಮೈಸೂರು ಖನಿಜ ನಿಯಮಿತ (₹ 313.53 ಕೋಟಿ), ಹಟ್ಟಿ ಚಿನ್ನದ ಗಣಿಗಳು ಕಂಪನಿ ನಿಯಮಿತ (₹ 144.63 ಕೋಟಿ) ಹಾಗೂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (₹ 113.44 ಕೋಟಿ). ಕರ್ನಾಟಕ ನೀರಾವರಿ ನಿಗಮ ನಿಗಮ ನಿಯಮಿತ (₹ 295.59 ಕೋಟಿ) ಮತ್ತು ಬೆಂಗಳೂರು ಮಹಾನಗರ ಸಾರಿಗೆ ನಿಗಮ (₹ 147.59 ಕೋಟಿ) ಭಾರಿ ನಷ್ಟಗಳನ್ನು ಅನುಭವಿಸಿದ್ದವು.

**1.18**. ಸಾವಉಗಳ ಇತರೆ ಕೆಲವು ಪ್ರಮುಖ ಪರಿಮಿತಿಗಳನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.10: ರಾಜ್ಯ ಸಾವಉಗಳ ಪ್ರಮುಖ ಪರಿಮಿತಿಗಳು**

**(₹ ಕೋಟಿಯಲ್ಲಿ)**

| ವಿವರಗಳು | 2010-11 | 2011-12 | 2012-13 | 2013-14 | 2014-15 |
|---|---|---|---|---|---|
| ಹೂಡಿಕೆ ಮಾಡಲಾಗಿದ್ದಂತಹ ಬಂಡವಾಳದ ಮೇಲಿನ ಪ್ರತಿಫಲ (ಶೇಕಡಾವಾರು) | 4.40 | 4.22 | 4.77 | 5.46 | 5.16 |
| ಸಾಲ | 25,364.38 | 29,197.31 | 27,434.29 | 28,434.00 | 32,086.94 |
| ವಹಿವಾಟು[13] | 41,493.51 | 34,490.58 | 37,867.13 | 44,908.32 | 48,765.18 |
| ಸಾಲ–ವಹಿವಾಟುಗಳ ನಡುವಿನ ಅನುಪಾತ | 0.61:1 | 0.85:1 | 0.72:1 | 0.63:1 | 0.66:1 |
| ಬಡ್ಡಿ ಪಾವತಿಗಳು | 2,269.00 | 2,555.79 | 2,557.69 | 3,038.67 | 4,090.73 |
| ಕ್ರೋಡೀಕೃತ ಲಾಭಗಳು/ನಷ್ಟಗಳು (–) | 1,007.36 | 1,368.93 | 1,388.01 | 1,894.94 | 731.66 |

**(ಕಾರ್ಯನಿರತ ಸಾವಉಗಳಿಗೆ ವಹಿವಾಟನ್ನು ಹೊರತುಪಡಿಸಿದಂತೆ ಮೇಲಿನ ಅಂಕಿಸಂಖ್ಯೆಗಳು, ಎಲ್ಲಾ ಸಾವಉಗಳಿಗೆ ಸಂಬಂಧಿಸಿರುತ್ತದೆ).**

**1.19**. ರಾಜ್ಯ ಸರ್ಕಾರವು ರೂಪಿಸಿದ (ಮೇ 2003) ಮಾರ್ಗಸೂಚಿಗಳ ಪ್ರಕಾರ ರಾಜ್ಯ ಸರ್ಕಾರವು ಈಕ್ವಿಟಿ ಷೇರುಗಳನ್ನು ಹೊಂದಿರುವ ಸಾರ್ವಜನಿಕ ಉದ್ದಿಮೆಗಳು ಅಥವಾ ಜಂಟಿ ಸಾಹಸೋದ್ಯಮಗಳ ನಿರ್ದೇಶಕ ಮಂಡಳಿಯಲ್ಲಿರುವ ಸರ್ಕಾರದ ನಾಮನಿರ್ದೇಶಿತರು, ಹೊಂದಿರುವ ಷೇರುಗಳ ಕನಿಷ್ಠಪಕ್ಷ ಶೇಕಡಾ 20ರಷ್ಟು ಷೇರು ಲಾಭಾಂಶವನ್ನು ಘೋಷಿಸುವಂತೆ ಒತ್ತಾಯಿಸತಕ್ಕದ್ದು. ಅವುಗಳ ಇತ್ತೀಚಿಗೆ

[12] ಕಾವೇರಿ ನೀರಾವರಿ ನಿಗಮ ನಿಯಮಿತ, ರಾಯಚೂರು ವಿದ್ಯುತ್ ನಿಗಮ ನಿಯಮಿತ ಹಾಗೂ ತದಡಿ ಬಂದರು ನಿಯಮಿತ.

[13] 30 ಸೆಪ್ಟೆಂಬರ್ 2015ರಲ್ಲಿದ್ದಂತೆ ಇತ್ತೀಚೆಗೆ ಅಂತಿಮಗೊಳಿಸಿದ ಕಾರ್ಯನಿರತ ಸಾವಉಗಳ ವಹಿವಾಟು.

ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ, 54 ಸಾವಉಗಳು[14] ಒಟ್ಟಾರೆಯಾಗಿ ₹ 1,438.66 ಕೋಟಿ ಲಾಭವನ್ನು ಗಳಿಸಿದ್ದವು, ಆದರೆ ಕೇವಲ 17 ಸಾವಉಗಳು ಮಾತ್ರ ₹ 64.93 ಕೋಟಿ ಮೊತ್ತದಷ್ಟು ಷೇರು ಲಾಭಾಂಶವನ್ನು ಘೋಷಿಸಿದ್ದವು.

### ಕಾರ್ಯಸ್ಥಗಿತಗೊಂಡಿರುವ ಸಾವಉಗಳನ್ನು ಪರ್ಯಾವಸಾನಗೊಳಿಸುವುದು

**1.20.** 31 ಮಾರ್ಚ್ 2015ರಲ್ಲಿದ್ದಂತೆ 12 ಕಾರ್ಯಸ್ಥಗಿತ ಸಾವಉಗಳಿದ್ದವು (ಎಲ್ಲವೂ ಕಂಪನಿಗಳು). ಇವುಗಳ ಪೈಕಿ, ಐದು ಸಾವಉಗಳು ತಮ್ಮ ಸಮಾಪನ (ಲಿಕ್ವಿಡೇಷನ್) ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದವು. ಕಳೆದ ಐದು ವರ್ಷಗಳಿಗೆ ಪ್ರತೀ ವರ್ಷದ ಅಂತ್ಯದಲ್ಲಿಯೂ ಇದ್ದಂತಹ ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆಯನ್ನು ಈ ಕೆಳಗೆ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 1.11: ಕಾರ್ಯಸ್ಥಗಿತ ಸಾವಉಗಳ ವಿವರಗಳು**

| ವಿವರಗಳು | 2010-11 | 2011-12 | 2012-13 | 2013-14 | 2014-15 |
|---|---|---|---|---|---|
| ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆ | 14 | 14 | 14 | 14 | 12 |

ಕಾರ್ಯಸ್ಥಗಿತ ಸಾವಉಗಳು ರಾಜ್ಯ ಆರ್ಥಿಕ ಬೆಳವಣಿಗೆಗೆ ಯಾವುದೇ ಕೊಡುಗೆಯನ್ನೂ ನೀಡುವುದಿಲ್ಲವಾದ್ದರಿಂದ ಹಾಗೂ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಉದ್ದೇಶಗಳನ್ನು ಈಡೇರಿಸುವುದಿಲ್ಲವಾದ್ದರಿಂದ, ಈ ಸಾವಉಗಳನ್ನು ಪರ್ಯಾವಸಾನಗೊಳಿಸುವ ಬಗ್ಗೆ ಪರಿಗಣಿಸಬೇಕು ಅಥವಾ ಅವುಗಳ ಪುನರ್–ಕಾರ್ಯಾರಂಭಕ್ಕೆ ಕ್ರಮಗಳನ್ನು ಕೈಗೊಳ್ಳಬೇಕು. 2014–15ರಲ್ಲಿ, ಕಾರ್ಯಸ್ಥಗಿತ ಸಾವಉಗಳು ಸಿಬ್ಬಂದಿ ವೆಚ್ಚಗಳಿಗಾಗಿ ₹ 27.81 ಕೋಟಿ ವೆಚ್ಚವನ್ನು ಭರಿಸಿದ್ದವು. ಈ ವೆಚ್ಚಕ್ಕಾಗಿ ರಾಜ್ಯ ಸರ್ಕಾರದಿಂದ ಬಾಡಿಗೆ, ಬಡ್ಡಿ ಸ್ವೀಕೃತಿಗಳು ಹಾಗೂ ಇತರೆ ಸ್ವೀಕೃತಿಗಳ ಮೂಲಕ ಹಣಕಾಸನ್ನು ಭರಿಸಲಾಗಿತ್ತು (₹ 3.09 ಕೋಟಿ).

**1.21.** ಕಾರ್ಯಸ್ಥಗಿತ ಸಾವಉಗಳಿಗೆ ಸಂಬಂಧಿಸಿದಂತೆ ಪರ್ಯಾವಸಾನಗೊಳಿಸುವುದಕ್ಕೆ ಸಂಬಂಧಿತ ಹಂತಗಳನ್ನು ಈ ಕೆಳಗೆ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 1.12: ಕಾರ್ಯಸ್ಥಗಿತ ಸಾವಉಗಳ ಪರ್ಯವಸಾನಗೊಳಿಸುವಲ್ಲಿನ ಹಂತಗಳು**

| ಕ್ರಮ ಸಂಖ್ಯೆ | ವಿವರಗಳು | ಕಂಪನಿಗಳು |
|---|---|---|
| 1 | ಕಾರ್ಯಸ್ಥಗಿತ ಸಾವಉಗಳ ಒಟ್ಟು ಸಂಖ್ಯೆ | 12 |
| 2 | ಮೇಲಿನ (1)ರ ಪೈಕಿ, ಈ ಕೆಳಗಿನವುಗಳ ಸಂಖ್ಯೆ | |
| (ಎ) | ನ್ಯಾಯಾಲಯದಿಂದ ಸಮಾಪನ ಪ್ರಕ್ರಿಯೆ (ಸಮಾಪಕರನ್ನು ನೇಮಕ ಮಾಡಿರುವುದು) | 5 |
| (ಬಿ) | ಪರ್ಯವಸಾನ ಬಗ್ಗೆ ಆದೇಶಗಳನ್ನು/ನಿರ್ದೇಶನಗಳನ್ನು ನೀಡಲಾಗಿದ್ದು, ಆದರೆ ಸಮಾಪನ ಪ್ರಕ್ರಿಯೆಯು ಇನ್ನೂ ಪ್ರಾರಂಭಗೊಂಡಿಲ್ಲದಿರುವುದು | 7 |

2014–15ರ ಸಾಲಿನಲ್ಲಿ, ಎರಡು ಕಂಪನಿಗಳು/ನಿಗಮಗಳನ್ನು ಪರ್ಯವಸಾನಗೊಳಿಸಲಾಗಿತ್ತು. ನ್ಯಾಯಾಲಯದ ಆದೇಶದ ಮೂಲಕ ಪರ್ಯವಸಾನ ಮಾರ್ಗವನ್ನು ಆಯ್ಕೆ ಮಾಡಿಕೊಂಡಂತಹ ಕಂಪನಿಗಳು ಹತ್ತರಿಂದ ಹನ್ನೆರಡು ವರ್ಷಗಳ ಅವಧಿಯವರೆಗೂ ಸಮಾಪನ ಪ್ರಕ್ರಿಯೆಯ ಅಡಿಯಲ್ಲಿಯೇ ಇರುವವು. ಕಂಪನಿಗಳ ಅಧಿನಿಯಮದ ಅಡಿಯಲ್ಲಿನ ಸ್ವಇಚ್ಛೆಯ ಪರ್ಯವಸಾನಗೊಳಿಸುವ ಪ್ರಕ್ರಿಯೆಯು ತ್ವರಿತವಾಗಿರುತ್ತದೆ ಹಾಗೂ ಅದನ್ನು ದೃಢಚಿತ್ತದಿಂದ ಅಳವಡಿಸಿಕೊಳ್ಳುವ ಅಗತ್ಯತೆ ಇದೆ.

[14] ನಾಲ್ಕು ಕಾರ್ಯಸ್ಥಗಿತ ಸಾವಉಗಳು ಒಳಗೊಂಡಂತೆ.

## ಲೆಕ್ಕಪತ್ರಗಳ ಮೇಲಿನ ಟೀಕೆಟಿಪ್ಪಣಿಗಳು

**1.22.** ಅರವತ್ತ ನಾಲ್ಕು ಕಾರ್ಯನಿರತ ಕಂಪನಿಗಳು ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ತಮ್ಮ 75 ಲೆಕ್ಕಪತ್ರಗಳನ್ನು ಮಹಾಲೇಖಾಪಾಲರಿಗೆ 1 ಅಕ್ಟೋಬರ್ 2014 ಹಾಗೂ 30 ಸೆಪ್ಟಂಬರ್ 2015ರ ನಡುವೆ ಕಳುಹಿಸಿದವು. ಇವುಗಳ ಪೈಕಿ, 49 ಲೆಕ್ಕಪತ್ರಗಳನ್ನು (42 ಕಂಪನಿಗಳ) ಪೂರಕ ಲೆಕ್ಕಪರಿಶೋಧನೆಗಾಗಿ ಆಯ್ಕೆ ಮಾಡಲಾಯಿತು. ಶಾಸನಬದ್ಧ ಲೆಕ್ಕಪರಿಶೋಧಕರ (ಸಿಎಜಿಯವರಿಂದ ನೇಮಕ ಮಾಡಲ್ಪಟ್ಟಂತಹ) ಲೆಕ್ಕಪರಿಶೋಧನಾ ವರದಿಗಳು ಹಾಗೂ ಸಿಎಜಿಯವರ ಪೂರಕ ಲೆಕ್ಕಪರಿಶೋಧನೆಗಳು ಲೆಕ್ಕಪತ್ರಗಳನ್ನು ನಿರ್ವಹಿಸುವಲ್ಲಿನ ಗುಣಮಟ್ಟವನ್ನು ಉತ್ತಮಪಡಿಸುವ ಅಗತ್ಯತೆ ಇದೆ ಎಂಬುದನ್ನು ಸೂಚಿಸುತ್ತಿದ್ದವು. ಶಾಸನಬದ್ಧ ಲೆಕ್ಕಪರಿಶೋಧಕರು ಹಾಗೂ ಸಿಎಜಿಯವರಿಂದ ಮಾಡಲ್ಪಟ್ಟಿರುವ ಟೀಕೆಟಿಪ್ಪಣಿಗಳಲ್ಲಿ ಒಳಗೊಂಡಿರುವ ಒಟ್ಟಾರೆ ಹಣದ ಮೌಲ್ಯದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 1.13: ಕಾರ್ಯನಿರತ ಕಂಪನಿಗಳ ಲೆಕ್ಕಪರಿಶೋಧನೆಯ ಟೀಕೆಟಿಪ್ಪಣಿಗಳ ಪರಿಣಾಮ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ. | ವಿವರಗಳು | 2012-13 | | 2013-14 | | 2014-15 | |
|---|---|---|---|---|---|---|---|
| | | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ |
| 1 | ಲಾಭದಲ್ಲಿನ ಇಳಿಕೆ | 5 | 78.31 | 15 | 524.19 | 14 | 746.20 |
| 2 | ಲಾಭದಲ್ಲಿನ ಹೆಚ್ಚಳ | 5 | 3.33 | 6 | 11.72 | 7 | 38.75 |
| 3 | ನಷ್ಟದಲ್ಲಿನ ಇಳಿಕೆ | 10 | 1.97 | 3 | 37.19 | 1 | 1.36 |
| 4 | ನಷ್ಟದಲ್ಲಿನ ಹೆಚ್ಚಳ | 9 | 228.28 | 10 | 499.83 | 8 | 656.53 |
| 5 | ಪ್ರಭಾವೀ ವಾಸ್ತವಾಂಶಗಳನ್ನು ಬಹಿರಂಗಪಡಿಸದಿರುವುದು | - | - | - | - | 5 | - |
| 6 | ವರ್ಗೀಕರಣದಲ್ಲಿನ ತಪ್ಪುಗಳು | - | - | - | - | 10 | - |

2014–15ರ ಸಾಲಿನಲ್ಲಿ, ಶಾಸನಬದ್ಧ ಲೆಕ್ಕಪರಿಶೋಧಕರು 25 ಲೆಕ್ಕಪತ್ರಗಳ ಮೇಲೆ ಷರತ್ತುರಹಿತ ವರದಿಗಳನ್ನು 47 ಲೆಕ್ಕಪತ್ರಗಳ ಮೇಲೆ ಷರತ್ತುಬದ್ಧ ವರದಿಗಳನ್ನು ಹಾಗೂ ಮೂರು ಲೆಕ್ಕಪತ್ರಗಳ ಮೇಲೆ ಪ್ರತಿಕೂಲ ವರದಿಗಳನ್ನು (ಲೆಕ್ಕಪತ್ರಗಳು ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುವುದಿಲ್ಲ ಎಂಬುದಾಗಿ ಅರ್ಥೈಸುವಂತಹ) ನೀಡಿದ್ದರು. ಇದು, ನಾಲ್ಕು ಲೆಕ್ಕಪತ್ರಗಳ ಮೇಲೆ ಸಿಎಜಿಯವರ ಟೀಕೆಟಿಪ್ಪಣಿಗಳನ್ನೂ ಒಳಗೊಂಡಿದೆ. ಪ್ರಸಕ್ತ ಸಾಲಿನಲ್ಲಿ 33 ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಅನುಸರಿಸದಿದ್ದಂತಹ 101 ದೃಷ್ಟಾಂತಗಳಿದ್ದವಾದ್ದರಿಂದ ಕಂಪನಿಗಳಿಂದ ಲೆಕ್ಕಪತ್ರ ಮಾನದಂಡಗಳ ಅನುಸರಣೆಯು ನಿಕೃಷ್ಟಮಟ್ಟದಲ್ಲಿತ್ತು.

**1.22.1.** ಅದೇ ರೀತಿಯಲ್ಲಿ, ಆರು ಕಾರ್ಯನಿರತ ಶಾಸನಬದ್ಧ ನಿಗಮಗಳು 2014–15 ಸಾಲಿನಲ್ಲಿ ತಮ್ಮ ಏಳು ಲೆಕ್ಕಪತ್ರಗಳನ್ನು ಪ್ರಧಾನ ಮಹಾಲೇಖಾಪಾಲರಿಗೆ ಕಳುಹಿಸಿದವು. ಇವುಗಳ ಪೈಕಿ, ನಾಲ್ಕು ಶಾಸನಬದ್ಧ ನಿಗಮಗಳ ನಾಲ್ಕು ಲೆಕ್ಕಪತ್ರಗಳು ಸಿಎಜಿಯವರ ಏಕೈಕ ಲೆಕ್ಕಪರಿಶೋಧನೆಗೆ ಸಂಬಂಧಿಸಿದ್ದವು, ಇತರೆ ಮೂರು ಶಾಸನಬದ್ಧ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆಗೆ ಒಳಪಟ್ಟನಂತರ ಪೂರಕ ಲೆಕ್ಕಪರಿಶೋಧನೆಗೆ ಸಂಬಂಧಿಸಿದ್ದವು. ಶಾಸನಬದ್ಧ ಲೆಕ್ಕಪರಿಶೋಧಕರ ಹಾಗೂ ಸಿಎಜಿಯವರ ಏಕೈಕ/ಪೂರಕ ಲೆಕ್ಕಪರಿಶೋಧನೆಯ ಲೆಕ್ಕಪರಿಶೋಧನಾ ವರದಿಗಳು ಲೆಕ್ಕಪತ್ರಗಳನ್ನು ನಿರ್ವಹಿಸುವಲ್ಲಿನ ಗುಣಮಟ್ಟವನ್ನು ಉತ್ತಮಪಡಿಸುವ ಅಗತ್ಯತೆ ಇದೆ ಎಂಬುದನ್ನು ಸೂಚಿಸುತ್ತಿದ್ದವು. ಶಾಸನಬದ್ಧ ಲೆಕ್ಕಪರಿಶೋಧಕರು ಹಾಗೂ ಸಿಎಜಿಯವರಿಂದ ಮಾಡಲ್ಪಟ್ಟಿರುವ ಟೀಕೆಟಿಪ್ಪಣಿಗಳಲ್ಲಿ ಒಳಗೊಂಡಿರುವ ಒಟ್ಟಾರೆ ಹಣದ ಮೌಲ್ಯದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 1.14: ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯ ಟೀಕೆಟಿಪ್ಪಣಿಗಳ ಪರಿಣಾಮ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2012-13 | | 2013-14 | | 2014-15 | |
|---|---|---|---|---|---|---|---|
| | | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ |
| 1 | ಲಾಭದಲ್ಲಿನ ಇಳಿಕೆ | 4 | 35.39 | 2 | 12.03 | 3 | 4.63 |
| 2 | ಲಾಭದಲ್ಲಿನ ಹೆಚ್ಚಳ | - | - | 1 | 2.47 | - | - |
| 3 | ನಷ್ಟದಲ್ಲಿನ ಇಳಿಕೆ | - | - | - | - | - | - |
| 4 | ನಷ್ಟದಲ್ಲಿನ ಹೆಚ್ಚಳ | 2 | 21.37 | 3 | 27.15 | 4 | 27.92 |

ಪ್ರಸಕ್ತ ಸಾಲಿನಲ್ಲಿ, ಏಳು ಲೆಕ್ಕಪತ್ರಗಳ ಪೈಕಿ, ಎಲ್ಲಾ ಏಳು ಲೆಕ್ಕಪತ್ರಗಳೂ ಷರತ್ತುಬದ್ಧ ಪ್ರಮಾಣಪತ್ರಗಳನ್ನು ಪಡೆದಿದ್ದವು. ಎರಡು ಶಾಸನಬದ್ಧ ನಿಗಮಗಳು ₹ 76.88 ಕೋಟಿ ಮೊತ್ತದಷ್ಟು ಲಾಭವನ್ನು ವರದಿ ಮಾಡಿದ್ದವು, ನಾಲ್ಕು ಶಾಸನಬದ್ಧ ನಿಗಮಗಳು ಒಟ್ಟಾರೆ ₹ 239.65 ಕೋಟಿ ಮೊತ್ತದಷ್ಟು ನಷ್ಟಗಳನ್ನು ವರದಿ ಮಾಡಿದ್ದವು.

## ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ

***ಸಾಧನಾ ಲೆಕ್ಕಪರಿಶೋಧನೆಗಳು ಹಾಗೂ ಕಂಡಿಕೆಗಳು***

**1.23**. 31 ಮಾರ್ಚ್ 2015ಕ್ಕೆ ಅಂತ್ಯಗೊಂಡ ಸಾಲಿಗೆ ಸಿಎಜಿಯವರ ವರದಿಗಾಗಿ ಎರಡು ಸಾಧನಾ ಲೆಕ್ಕಪರಿಶೋಧನಾ ವರದಿಗಳನ್ನು ಹಾಗೂ 17 ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ಉತ್ತರಗಳನ್ನು ಒದಗಿಸಲು ಸಂಬಂಧಿತ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳಿಗೆ ನೀಡಲಾಗಿತ್ತು. ಮೂರು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಉತ್ತರಗಳನ್ನು ರಾಜ್ಯ ಸರ್ಕಾರದಿಂದ ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2015).

## ಲೆಕ್ಕಪರಿಶೋಧನಾ ವರದಿಗಳ ಮೇಲೆ ಅನುಸರಣಾ ಕ್ರಮಗಳು

***ಬಾಕಿಯಿರುವ ಉತ್ತರಗಳು***

**1.24**. ಸಿಎಜಿಯವರ ವರದಿಯು, ಲೆಕ್ಕಪರಿಶೋಧನೆಯ ಪರಿಶೀಲನಾ ಪ್ರಕ್ರಿಯೆಯ ಪರಾಕಾಷ್ಠೆಯನ್ನು ಪ್ರತಿನಿಧಿಸುತ್ತದೆ. ಆದ್ದರಿಂದ, ಅದು ಕಾರ್ಯಾಂಗದಿಂದ ಒಂದು ಸೂಕ್ತವಾದಂತಹ ಹಾಗೂ ಸಮಯೋಚಿತವಾದಂತಹ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತದೆ. ಸಿಎಜಿಯವರ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಗಿರುವಂತಹ ಕಂಡಿಕೆಗಳು/ಸಾಧನಾ ಲೆಕ್ಕಪರಿಶೋಧನೆಗಳಿಗೆ, ಸಾರ್ವಜನಿಕ ಉದ್ದಿಮೆಗಳ ಸಮಿತಿಯಿಂದ ಯಾವುದೇ ಪ್ರಶ್ನಾವಳಿಗಳಿಗೂ ಕಾಯದೆಯೇ ಅವುಗಳನ್ನು ಶಾಸಕಾಂಗದ ಮುಂದೆ ಮಂಡಿಸಲಾದಂತಹ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯ ಒಳಗೆ ಉತ್ತರಗಳನ್ನು ಸಲ್ಲಿಸುವಂತೆ ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯು ಎಲ್ಲಾ ಆಡಳಿತಾತ್ಮಕ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಿತು (ಜನವರಿ 1974).

**ಕೋಷ್ಟಕ ಸಂಖ್ಯೆ 1.15: ಬಾರದಿರುವ ಉತ್ತರಗಳು (30 ಸೆಪ್ಟಂಬರ್ 2015ರಲ್ಲಿದ್ದಂತೆ)**

| ಲೆಕ್ಕಪರಿಶೋಧನಾ ವರದಿಯ ಸಂಬಂಧಿಸಿದ್ದಂತಹ ವರ್ಷ (ವಾಣಿಜ್ಯ/ಸಾವಲುಗಳು) | ಲೆಕ್ಕಪರಿಶೋಧನಾ ವರದಿಯನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಲಾದ ದಿನಾಂಕ | ಲೆಕ್ಕಪರಿಶೋಧನಾ ವರದಿಯಲ್ಲಿ ಒಳಗೊಂಡಿದ್ದಂತಹ ಒಟ್ಟಾರೆ ಲೆಕ್ಕಪರಿಶೋಧನಾ ವರದಿಗಳು ಹಾಗೂ ಕಂಡಿಕೆಗಳು | | ಉತ್ತರಗಳು ಸ್ವೀಕೃತಗೊಂಡಿರದ ಲೆಕ್ಕಪರಿಶೋಧನಾ ವರದಿಗಳು/ಕಂಡಿಕೆಗಳ ಸಂಖ್ಯೆ | |
|---|---|---|---|---|---|
| | | ಸಾಧನಾ ಲೆಕ್ಕಪರಿಶೋಧನಾ ವರದಿಗಳು | ಕಂಡಿಕೆಗಳು | ಲೆಕ್ಕಪರಿಶೋಧನಾ ವರದಿಗಳು | ಕಂಡಿಕೆಗಳು |
| 2013-14 | 13.02.2015 | 2 | 19 | 2 | 7 |

ಮೂರು ಇಲಾಖೆಗಳಿಗೆ[15] ಸಂಬಂಧಿಸಿದಂತೆ, ಎರಡು ಸಾಧನಾ ಲೆಕ್ಕಪರಿಶೋಧನಾ ವರದಿಗಳು ಹಾಗೂ ಏಳು ಕಂಡಿಕೆಗಳಿಗೆ ಉತ್ತರಗಳನ್ನು ನಿರೀಕ್ಷಿಸಲಾಗುತ್ತಿದೆ. (ಸೆಪ್ಟಂಬರ್ 2015) ಎಂಬುದನ್ನು ಕಾಣಬಹುದು.

***ಸಾರ್ವಜನಿಕ ಉದ್ದಿಮೆಗಳ ಸಮಿತಿಯಿಂದ ಲೆಕ್ಕಪರಿಶೋಧನಾ ವರದಿಗಳ ಬಗ್ಗೆ ಚರ್ಚೆ***

**1.25**. 30 ಸೆಪ್ಟಂಬರ್ 2015ರಲ್ಲಿದ್ದಂತೆ, ಸಾವಉಗಳ ಮೇಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿದ್ದಂತಹ ಸಾಧನಾ ಲೆಕ್ಕಪರಿಶೋಧನಾ ವರದಿಗಳು ಮತ್ತು ಕಂಡಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಮಿತಿಯಿಂದ ಅವುಗಳ ಬಗೆಗಿನ ಚರ್ಚೆಯ ಸ್ಥಿತಿಗತಿಯು ಈ ಕೆಳಗಿನಂತಿತ್ತು.

**ಕೋಷ್ಟಕ ಸಂಖ್ಯೆ 1.16: ಸಾಧನಾ ಲೆಕ್ಕಪರಿಶೋಧನಾ ವರದಿಗಳು ಮತ್ತು ಕಂಡಿಕೆಗಳ ಬಗೆಗಿನ ಚರ್ಚೆಯ ಸ್ಥಿತಿಗತಿ**

| ಲೆಕ್ಕಪರಿಶೋಧನಾ ವರದಿಯ ಅವಧಿ | ಲೆಕ್ಕಪರಿಶೋಧನಾ ವರದಿಗಳು ಮತ್ತು ಕಂಡಿಕೆಗಳ ಸಂಖ್ಯೆ | | | |
|---|---|---|---|---|
| | ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವುದು | | ಚರ್ಚಿಸಲಾದ ಕಂಡಿಕೆಗಳು | |
| | ಲೆಕ್ಕಪರಿಶೋಧನಾ ವರದಿಗಳು | ಕಂಡಿಕೆಗಳು | ಲೆಕ್ಕಪರಿಶೋಧನಾ ವರದಿಗಳು | ಕಂಡಿಕೆಗಳು |
| 2009-10 | 2 | 16 | 2 | 15 |
| 2010-11 | 2 | 11 | 1 | 11 |
| 2011-12 | 2 | 12 | 0 | 11 |
| 2012-13 | 2 | 12 | 2 | 9 |
| 2013-14 | 2 | 19 | 0 | 5 |
| **ಒಟ್ಟು** | **10** | **70** | **5** | **51** |

***ಸಾರ್ವಜನಿಕ ಉದ್ದಿಮೆಗಳ ಸಮಿತಿಯ ವರದಿಗಳಿಗೆ ಅನುಸರಣಾ ಕ್ರಮ***

**1.26**. ಡಿಸೆಂಬರ್ 2011 ಮತ್ತು ಮಾರ್ಚ್ 2015ರ ನಡುವೆ ರಾಜ್ಯ ಶಾಸಕಾಂಗಕ್ಕೆ ಮಂಡಿಸಲಾದಂತಹ ಸಾಉಗಳ ಸಮಿತಿಯ ಆರು ವರದಿಗಳ ನಾಲ್ಕು ಕಂಡಿಕೆಗಳಿಗೆ ಸಂಬಂಧಿಸಿದಂತೆ ಕ್ರಮಗಳನ್ನು ಕೈಗೊಂಡ ಬಗ್ಗೆ ಟಿಪ್ಪಣಿಗಳನ್ನು ಈ ಕೆಳಗೆ ಸೂಚಿಸಿರುವಂತೆ ಸ್ವೀಕರಿಸಿರಲಿಲ್ಲ (ಡಿಸೆಂಬರ್ 2015).

**ಕೋಷ್ಟಕ ಸಂಖ್ಯೆ 1.17: ಸಾಉಗಳ ಸಮಿತಿಯ ವರದಿಗಳ ಅನುಸರಣೆ**

| ಸಾಉಗಳ ಸಮಿತಿಯ ವರದಿಗಳ ವರ್ಷ | ಸಾಉಗಳ ಸಮಿತಿಯ ವರದಿಗಳ ಒಟ್ಟು ಸಂಖ್ಯೆ | ಸಾಉಗಳ ಸಮಿತಿಯ ವರದಿಗಳಲ್ಲಿನ ಶಿಫಾರಸುಗಳ ಒಟ್ಟು ಸಂಖ್ಯೆ | ಕ್ರಮಗಳನ್ನು ಕೈಗೊಂಡ ಬಗ್ಗೆ ಟಿಪ್ಪಣಿಗಳನ್ನು ಸ್ವೀಕರಿಸದೇ ಇದ್ದಂತಹ ಶಿಫಾರಸುಗಳ ಸಂಖ್ಯೆ |
|---|---|---|---|
| 2011-12 | 1 | 25 | 25 |
| 2012-13 | 2 | 18 | 18 |
| 2013-14 | 2 | 18 | 18 |
| 2014-15 | 1 | 5 | 5 |
| **ಒಟ್ಟು** | **6** | **66** | **66** |

ನಾಲ್ಕು ಇಲಾಖೆಗಳಿಗೆ[16] ಸಂಬಂಧಿತ ಕಂಡಿಕೆಗಳಿಗೆ ಸಂಬಂಧಿಸಿದಂತೆ, 2008–09ರಿಂದ 2011–12ನೇ ಸಾಲುಗಳಿಗೆ ಸಿಎಜಿಯವರ ವರದಿಗಳಲ್ಲಿ ಕಂಡುಬಂದಿದ್ದಂತಹ ಕಂಡಿಕೆಗಳಿಗೆ ಸಾರ್ವಜನಿಕ ಉದ್ಯಮಗಳ ಸಮಿತಿಯ ಈ ವರದಿಗಳು, ಶಿಫಾರಸುಗಳನ್ನು ಒಳಗೊಂಡಿದ್ದವು.

[15] ಇಂಧನ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ ಮತ್ತು ಜಲ ಸಂಪನ್ಮೂಲಗಳ ಇಲಾಖೆ.

[16] ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ಇಂಧನ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.

ಸರ್ಕಾರವು ಈ ಮುಂದಿನ ಅಂಶಗಳನ್ನು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಶಿಫಾರಸು ಮಾಡಲಾಗುತ್ತಿದೆ: ಎ) ಪರೀಕ್ಷಣಾ ವರದಿಗಳು/ಕರಡು ಕಂಡಿಕೆಗಳು/ಸಾಧನಾ ಲೆಕ್ಕಪರಿಶೋಧನೆಗಳಿಗೆ ಉತ್ತರಗಳನ್ನು ಹಾಗೂ ಸಾಉಗಳ ಸಮಿತಿಯ ಶಿಫಾರಸುಗಳಿಗೆ ಕ್ರಮಗಳನ್ನು ಕೈಗೊಂಡ ಬಗ್ಗೆ ಟಿಪ್ಪಣಿಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಕಳುಹಿಸುವುದು; ಬಿ) ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳಿಗೆ ಪ್ರತಿಕ್ರಿಯೆ ನೀಡುವ ವ್ಯವಸ್ಥೆಯನ್ನು ಪುನರ್–ಸ್ಥಾಪಿಸುವುದು.

**ಪರಿವೀಕ್ಷಣಾ ವರದಿಗಳಿಗೆ ಸ್ಪಂದನೆ**

**1.27**. ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಗಮನಿಸಲಾದ ಲೆಕ್ಕಪರಿಶೋಧನಾ ಅಂಶಗಳನ್ನು ಸ್ಥಳದಲ್ಲೇ ಪರಿಹರಿಸಲಾಗದಿದ್ದಲ್ಲಿ ಪರಿವೀಕ್ಷಣಾ ವರದಿಗಳ ಮೂಲಕ ಸಾರ್ವಜನಿಕ ಉದ್ದಿಮೆಗಳ ಮತ್ತು ಅವಕ್ಕೆ ಸಂಬಂಧಿಸಿದ ರಾಜ್ಯ ಸರ್ಕಾರದ ಇಲಾಖೆಗಳ ಮುಖ್ಯಸ್ಥರ ಗಮನಕ್ಕೆ ತರಲಾಗುತ್ತದೆ. ಸಾರ್ವಜನಿಕ ಉದ್ದಿಮೆಗಳ ಮುಖ್ಯಸ್ಥರು ಪರಿವೀಕ್ಷಣಾ ವರದಿಗಳಿಗೆ ಆಯಾ ಇಲಾಖೆಗಳ ಮುಖ್ಯಸ್ಥರ ಮೂಲಕ ಒಂದು ತಿಂಗಳ ಅವಧಿಯ ಒಳಗಾಗಿ ಉತ್ತರಗಳನ್ನು ನೀಡಬೇಕಾಗುತ್ತದೆ. 31 ಮಾರ್ಚ್ 2015ರಲ್ಲಿ ಬಾಕಿ ಇರುವ ಇಲಾಖಾವಾರು ಪರಿವೀಕ್ಷಣಾ ವರದಿ ಮತ್ತು ಲೆಕ್ಕ ಪರಿಶೋಧನಾ ಅವಲೋಕನಗಳ ವಿವರಗಳನ್ನು **ಅನುಬಂಧ–3**ರಲ್ಲಿ ನೀಡಲಾಗಿದೆ.

ಸರ್ಕಾರವು ನೇಮಿಸಿದ ಲೆಕ್ಕಪರಿಶೋಧನಾ ಮೇಲ್ವಿಚಾರಣಾ ಕೋಶದ ವರದಿಗಳ ಆಧಾರದ ಮೇಲೆ, ಪರಿವೀಕ್ಷಣಾ ವರದಿಗಳಿಗೆ ಪ್ರತಿಕ್ರಿಯಿಸಲು ವಿಫಲರಾದ ಅಧಿಕಾರಿಗಳ ವಿರುದ್ಧ (ಅ) ಕ್ರಮ ಕೈಗೊಳ್ಳಲು ಮತ್ತು (ಬ) ನಷ್ಟ/ಬಾಕಿ ಇರುವ ಮುಂಗಡಗಳು/ಹೆಚ್ಚಿನ ಪಾವತಿಗಳನ್ನು ನಿಗದಿತ ಸಮಯದೊಳಗೆ ವಸೂಲಿಮಾಡಲು ಒಂದು ಕಾರ್ಯವಿಧಾನವು ಅಸ್ತಿತ್ವದಲ್ಲಿದೆ ಎಂಬುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕೆಂದು ಶಿಫಾರಸ್ಸು ಮಾಡಲಾಗಿದೆ.

**ಈ ವರದಿಯ ವ್ಯಾಪ್ತಿ**

**1.28**. ಈ ವರದಿಯು ₹ 758.70 ಕೋಟಿ ಮೊತ್ತದಷ್ಟು ಆರ್ಥಿಕ ಪರಿಣಾಮ ಹೊಂದಿರುವ 17 ಲೆಕ್ಕಪರಿಶೋಧನಾ ಕಂಡಿಕೆಗಳು ಮತ್ತು 'ಕರ್ನಾಟಕದ ವಿದ್ಯುತ್ ಸರಬರಾಜು ಕಂಪನಿಗಳಿಂದ ನಿರಂತರ ಜ್ಯೋತಿ ಯೋಜನೆಯ ಅನುಷ್ಠಾನ' ಹಾಗೂ 'ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ' ಎಂಬ ಎರಡು ಸಾಧನಾ ಲೆಕ್ಕಪರಿಶೋಧನೆಗಳನ್ನು ಒಳಗೊಂಡಿದೆ.

**ಬಂಡವಾಳ ಹಿಂತೆಗೆತ, ಪುನರ್‌ರಚನೆ ಹಾಗೂ ಸಾವಉಗಳ ಖಾಸಗೀಕರಣ**

**1.29**. ರಾಜ್ಯ ಸರ್ಕಾರವು ರಾಜ್ಯದಲ್ಲಿನ ಸಾರ್ವಜನಿಕ ವಲಯದ ಉದ್ದಿಮೆಗಳ ಸುಧಾರಣೆಗಳು ಹಾಗೂ ಖಾಸಗೀಕರಣದ ಮೇಲೆ ಒಂದು ಸಮಗ್ರ ಕಾರ್ಯನೀತಿಗೆ ಅನುಮೋದನೆಯನ್ನು ನೀಡಿತು (ಫೆಬ್ರವರಿ 2001). ಅದರಂತೆಯೇ, ಸರ್ಕಾರವು 31 ಸಾವಉಗಳನ್ನು ಪರ್ಯವಸಾನ, ಪುನರ್‌ರಚನೆ ಹಾಗೂ ಖಾಸಗೀಕರಣಕ್ಕಾಗಿ ಗುರುತಿಸಿತು. ಸೆಪ್ಟಂಬರ್ 2015ರ ಅಂತ್ಯದಲ್ಲಿದ್ದಂತೆ, ಏಳು ಕಂಪನಿಗಳನ್ನು[17] ಸಮಾಪನಗೊಳಿಸಲಾಯಿತು/ ವಿಲೀನಗೊಳಿಸಲಾಯಿತು. ಪರ್ಯವಸಾನಗೊಳಿಸುವುದಕ್ಕಾಗಿ/ ಖಾಸಗೀಕರಣಗೊಳಿಸುವುದಕ್ಕಾಗಿ/ಪುನರ್‌ರಚನೆಗೊಳಿಸುವುದಕ್ಕಾಗಿ ಗುರುತಿಸಲಾಗಿದ್ದಂತಹ ಉಳಿದ 24 ಕಂಪನಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಕೈಗೊಂಡ ಕ್ರಮಗಳ ಬಗೆಗಿನ ಸ್ಥಿತಿಗತಿಯು ಈ ಕೆಳಗಿನಂತಿದೆ:

[17] ಕರ್ನಾಟಕ ಟಂಗ್‌ಸ್ಟನ್ ಮೋಲಿ ನಿಯಮಿತ, ಕರ್ನಾಟಕ ಕೃಷಿ ಪೋಷಕಾಂಶಗಳು ನಿಯಮಿತ, ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಚಲನಚಿತ್ರ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತ, ಚಾಮುಂಡಿ ಯಂತ್ರೋಪರಣಗಳ ನಿಯಮಿತ ಹಾಗೂ ಕರ್ನಾಟಕ ರಾಜ್ಯ ವಸ್ತ್ರೋದ್ಯಮಗಳ ನಿಯಮಿತ.

**ಕೋಷ್ಟಕ ಸಂಖ್ಯೆ 1.18: ಸಾವಉಗಳ ಬಂಡವಾಳ ಹಿಂತೆಗೆತ/ಪುನರ್‌–ರಚನೆಯ ಸ್ಥಿತಿಗತಿಗಳು**

| ವಿವರಗಳು | ಕಂಪನಿಗಳ ಸಂಖ್ಯೆ | ಸರ್ಕಾರಿ ಆದೇಶವನ್ನು ನೀಡಲಾಗಿರುವುದು | ಸರ್ಕಾರಿ ಆದೇಶವನ್ನು ಇನ್ನೂ ನೀಡದಿರುವುದು |
|---|---|---|---|
| ಪರ್ಯವಸಾನಗೊಳಿಸುವುದಕ್ಕಾಗಿ ನಿಶ್ಚಯಿಸಲಾದಂತಹ ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳು | 12 | 12[Э] | - |
| ಪರ್ಯವಸಾನಗೊಳಿಸುವುದಕ್ಕಾಗಿ ನಿಶ್ಚಯಿಸಲಾದಂತಹ ಕಾರ್ಯನಿರತ ಸರ್ಕಾರಿ ಕಂಪನಿಗಳು | 3 | 1[¢] | 2[@] |
| ಖಾಸಗೀಕರಣಗೊಳಿಸಲು ನಿಶ್ಚಯಿಸಲಾದಂತಹ ಕಾರ್ಯನಿರತ ಸರ್ಕಾರಿ ಕಂಪನಿಗಳು | 8 | 6[♥] | 2[♣] |
| ಕಾರ್ಯನಿರತ ಸರ್ಕಾರಿ ಕಂಪನಿಗಳ ಪುನರ್‌–ರಚನೆ | 1 | 1[Ω] | - |

ಅಕ್ಟೋಬರ್ 2005ರಲ್ಲಿ, ಸರ್ಕಾರವು ಸಾರ್ವಜನಿಕ ವಲಯದ ಉದ್ದಿಮೆಗಳ ಸುಧಾರಣೆಗಳ ಮೇಲೆ ಒಂದು ಕಾರ್ಯನೀತಿಯನ್ನು ಅಳವಡಿಸಿಕೊಂಡಿತು, ಈ ಹಿಂದಿನ ಸುಧಾರಣಾ ಪ್ರಕ್ರಿಯೆಗಳನ್ನು ಸಂಯೋಜಿಸಿಕೊಳ್ಳುವ ಮೂಲಕ ಅದರ ಕಾರ್ಯಗತಗೊಳಿಸುವ ವ್ಯವಸ್ಥೆಯನ್ನು ಒಳಗೊಂಡಂತೆ ಪ್ರಕರಣವಾರು ಆಧಾರದ ಮೇರೆಗೆ ಒಂದು ನಿರ್ಧಾರಣೆಯನ್ನು ಅದು ನಿರ್ದಿಷ್ಟಪಡಿಸಿತ್ತು. ಅಧ್ಯಯನದ ನಂತರ, ಸೂಕ್ತವಾದಂತಹ ನಿರ್ದಿಷ್ಟ ಪರಿಹಾರಕ ಕ್ರಮವನ್ನು ಪರಿಗಣಿಸಬೇಕಿತ್ತು. ಸಾವಉಗಳ ಪ್ರಕರಣವಾರು ಆಧಾರದ ಅಧ್ಯಯನದ ಶಿಫಾರಸ್ಸುಗಳ ಪ್ರಸ್ತುತ ಸ್ಥಿತಿಗತಿಯನ್ನು ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2015).

Э **ಅನುಬಂಧ–2ರ** ಪ್ರಕಾರ ಎಲ್ಲಾ ಕಾರ್ಯಸ್ಥಗಿತ ಕಂಪನಿಗಳು.

¢ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ.

@ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ರಾಜ್ಯ ವಿದ್ಯುನ್ಮಾನಗಳ ಅಭಿವೃದ್ಧಿ ನಿಗಮ ನಿಯಮಿತ.

♥ ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮ ನಿಯಮಿತ, ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ, ಮೈಸೂರು ವಿದ್ಯುತ್ ಕೈಗಾರಿಕೆಗಳ ನಿಯಮಿತ, ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ, ಮೈಸೂರು ಖನಿಜಗಳ ನಿಯಮಿತ, ಶ್ರೀ ಕಂಠೀರವ ಸ್ಟೂಡಿಯೋಗಳು ನಿಯಮಿತ.

♣ ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮೈಸೂರು ಕಾಗದ ಕಾರ್ಖಾನೆ ನಿಯಮಿತ.

Ω ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಗಳ ನಿಗಮ ನಿಯಮಿತವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಜೊತೆ ವಿಲೀನಗೊಳಿಸಬೇಕಾಗಿದೆ.